
॥ ಶ್ರೀಃ ॥
॥ ಶ್ರೀಮತೇ ರಾಮಾನುಜಾಯ ನಮಃ ॥
॥ ಸ್ವಾಮಿ ಪಿಳ್ಳೈಲೋಕಾಚಾರ್ಯರ್ ತಿರುವಡಿಗಳೇ ಶರಣಂ ॥



# ಸ್ವಾಮಿ ಪಿಳ್ಳೈಲೋಕಾಚಾರ್ಯರ ರಹಸ್ಯ ಗ್ರಂಥಗಳು


(ಒಂದು ಕಿರುಪರಿಚಯ)

## ಶ್ರೀ ಪಿಳ್ಳೈಲೋಕಾಚಾರ್ಯ - 800 ಭಕ್ತಿಪೂರ್ವಕ ಸಮರ್ಪಣೆ

ಲೇಖಕರು :
**ಶ್ರೀಮತಿ ವಿದುಷಿ. ರಮಾಶ್ರೀನಿವಾಸನ್**
ಬಿ.ಎಸ್ಸಿ., ಎಂ.ಎ., (ಕನ್ನಡ), ಎಂ.ಎ., (ಸಂಸ್ಕೃತ)

ಪ್ರಕಾಶಕರು :
**ಶ್ರೀ ವೈಷ್ಣವಶ್ರೀ**
ನಂ.7, 6-ಎ, ಮೈನ್ ರೋಡ್, ಮಾರುತಿ ಎಕ್ಸ್‌ಟೆನ್‌ಷನ್
ಬೆಂಗಳೂರು - 560 021. ದೂರವಾಣಿ : 23320572

|| ಶ್ರೀಃ ||
|| ಶ್ರೀಮತೇ ರಾಮಾನುಜಾಯ ನಮಃ ||
|| ಸ್ವಾಮಿ ಪಿಳ್ಳೈಲೋಕಾಚಾರ್ಯರ್ ತಿರುವಡಿಗಳೇ ಶರಣಂ ||



# ಸ್ವಾಮಿ ಪಿಳ್ಳೈಲೋಕಾಚಾರ್ಯರ ರಹಸ್ಯ ಗ್ರಂಥಗಳು

(ಒಂದು ಕಿರುಪರಿಚಯ)

## ಶ್ರೀ ಪಿಳ್ಳೈಲೋಕಾಚಾರ್ಯ - 800

## ಭಕ್ತಿಪೂರ್ವಕ ಸಮರ್ಪಣೆ

ಲೇಖಕರು :

**ಶ್ರೀಮತಿ ವಿದುಷಿ. ರಮಾಶ್ರೀನಿವಾಸನ್**

ಬಿ.ಎಸ್ಸಿ., ಎಂ.ಎ., (ಕನ್ನಡ), ಎಂ.ಎ., (ಸಂಸ್ಕೃತ)

ಪ್ರಕಾಶಕರು :

ಶ್ರೀ ವೈಷ್ಣವಶ್ರೀ

ನಂ.7, 6-ಎ, ಮೈನ್ ರೋಡ್, ಮಾರುತಿ ಎಕ್ಸ್‌ಟೆನ್‌ಷನ್

ಬೆಂಗಳೂರು - 560 021. ದೂರವಾಣಿ : 23320572

**SRI PILLAI LOKACHARYARA RAHASYA GRANTHAGALU**
(Ondu Kiru Parichaya) by
**Smt. Ramasrinivasan.**

Published by : **'SRIVAISHNAVASRI'**
6th A Main Road,
Maruthi Extension,
Bangalore -560 021.

Pages : 16

First Edition - 2005

No. of Copies - 1000

**Price - Rs.20/-**

Copy Right : Reserved

Printed at :
**PUSHPANJALI ENTERPRISE**
No.33, 6th 'A' Main,
Maruthi Extension,
Gayathrinagar,
Bangalore - 560 021.
Phone : 23127967

|| ಶ್ರೀಃ ||

|| ಶ್ರೀಮತೇ ರಾಮಾನುಜಾಯ ನಮಃ ||

|| ಸ್ವಾಮಿ ಪಿಳ್ಳೈಲೋಕಾಚಾರ್ಯರ್ ತಿರುವಡಿಗಳೇ ಶರಣಂ ||

ಅಖಿಲಹೇಯ ಪ್ರತ್ಯನೀಕ ಕಲ್ಯಾಣೈಕತಾನನಾದ ಆ ಪರಮಾತ್ಮನು ಶ್ರಿಯಃಪತಿಯಾಗಿ ಶ್ರೀವೈಕುಂಠನಿಕೇತನವಾಗಿ ನಿರತಿಶಯಾನಂದಯುಕ್ತನಾದವನೆಂದು ಶ್ರುತಿಸ್ಮೃತಿ ಇತಿಹಾಸ ಪುರಾಣಗಳಲ್ಲಿ ಕೊಂಡಾಡಲ್ಪಟ್ಟಿದ್ದಾನೆ. ಆ ಪರಮಾತ್ಮನು ದಿವ್ಯಭವ್ಯಸ್ವರೂಪಗಳನ್ನು ಪರಿಪೂರ್ಣವಾಗಿ ಅನುಭವಿಸಿ ಅವನ ಚರಣನಳಿನಗಳಲ್ಲಿ ನಿತ್ಯಕೈಂಖರ್ಯಪರರಾಗಿರುವ ಪ್ರಾಪ್ತಿ ಸಕಲ ಚೇತನರಿಗೂ ಉಂಟು. ಆದರೆ ವಿವೇಕರಹಿತರಾಗಿ ಅಂತಹ ಭಾಗ್ಯದಿಂದ ಚ್ಯುತರಾಗಿ 'ಅಸನ್ನೇವ' ಎಂಬಂತೆ ಅಸತ್ಕಲ್ಪರಾಗಿರುವ ಈ ಸಂಸಾರಿ ಚೇತನರ ದುರ್ದಶೆಯನ್ನು ಕಂಡು ಮರುಗಿ ಅತ್ಯಂತ ವ್ಯಾಕುಲನಾಗಿ ಆ ಪರಮಾತ್ಮನು 'ಬಹುಸ್ಯಾಂ ಪ್ರಜಾಯೇಯ' ಎಂದು ಜಗತ್‌ಸೃಷ್ಟಿಯ ಸಂಕಲ್ಪ ಮಾಡುತ್ತಾನೆ. ಅಸತ್ಕಲ್ಪರಾದ ಈ ಚೇತನರಿಗೆ ಕರಣಕಳೇಬರಗಳನ್ನಿತ್ತು ಸೃಷ್ಟಿಯನ್ನು ಮಾಡುತ್ತಾನೆ. ಅವುಗಳು ಸದ್ವಿನಿಯೋಗವಾಗುವುದಕ್ಕಾಗಿ ಅಂದರೆ -

ವಿಚಿತ್ರಾ, ದೇಹಸಂಪತ್ತಿಃ ಈಶ್ವರಾಯ ನಿವೇದಿತುಂ
ಪೂರ್ವಮೇದ ಕೃತಾ ಬ್ರಹ್ಮನ್ ಹಸ್ತಪಾದಾದಿ ಸಂಯುತಾ || ಎಂಬಂತೆ

ಭಗವದರ್ಪಣವಾಗುವುದಕ್ಕಾಗಿ. ನಂತರ ಈ ಜಗತ್ತಿನ ಮಾರ್ಗದರ್ಶನಕ್ಕಾಗಿ ಅಪೌರುಷೇಯ, ನಿತ್ಯನಿರ್ದುಷ್ಟ ಸ್ವತಃ ಪ್ರಮಾಣಗಳಾದ ವೇದಗಳನ್ನೂ ತದುಪಬೃಂಹಣಗಳಾದ ಸ್ಮೃತೀತಿಹಾಸ ಪುರಾಣಗಳನ್ನೂ ಪ್ರವರ್ತನ ಮಾಡಿದ. ಆದರೆ ಆ ಶಾಸ್ತ್ರಾಭ್ಯಾಸಕ್ಕೆ ಅನೇಕ ಯೋಗ್ಯತೆಗಳು ಅವಶ್ಯವಾದ್ದರಿಂದ ಆ ಪ್ರಕಾರವಾಗಿ ಜ್ಞಾನವೇರ್ಪಟ್ಟು ಉಜ್ಜೀವನವನ್ನು ಹೊಂದುವುದು ಸಂಸಾರಿಚೇತನರಿಗೆ ದುಷ್ಕರವಾಯಿತು. ಇದನ್ನು ಅರಿತ ಆ ಸರ್ವೇಶ್ವರನು ಸಕಲಶಾಸ್ತ್ರತಾತ್ಪರ್ಯಗಳನ್ನು ಸುಗ್ರಹವಾಗಿ ಪಾಮರರಾದ ಸಂಸಾರಿಗಳು ಅರಿಯುವಂತೆ ಮಾಡಲು ಸಂಕಲ್ಪಿಸಿದ. ಹೀಗೆ ಶ್ರೀಮನ್ನಾರಾಯಣನೇ ಆತ್ಮಸ್ವರೂಪ, ಪರಮಾತ್ಮ ಸ್ವರೂಪ, ಉಪಾಯ, ವಿರೋಧಿ ಫಲಸ್ವರೂಪಗಳನ್ನು ಸುವ್ಯಕ್ತವಾಗಿ ನಿರೂಪಿಸುವ 'ರಹಸ್ಯತ್ರಯ'ಗಳನ್ನು ತಾನೇ ಆಚಾರ್ಯನಾಗಿ ಪರಮಕೃಪೆಯಿಂದ ಉಪದೇಶಿಸಿದ. ಆದ್ದರಿಂದಲೇ ಶ್ರೀ ವೈಷ್ಣವ ಗುರು ಪರಂಪರೆಯಲ್ಲಿ ಆ ಪರಮಾತ್ಮನು ಪ್ರಥಮಾಚಾರ್ಯ ಸ್ಥಾನವನ್ನು ಅಲಂಕರಿಸಿದ್ದಾನೆ.

ರಹಸ್ಯತ್ರಯಗಳು - ತಿರುಮಂತ್ರಮ್, ದ್ವಯಂ ಮತ್ತು ಚರಮಶ್ಲೋಕ ಎಂಬವುಗಳಾಗಿವೆ. ಇವುಗಳು ಗುಹ್ಯವಾದ ಪರಮಾರ್ಥಗಳನ್ನು ಪ್ರತಿಪಾದಿಸುವುದ ರಿಂದಲೂ, 'ಗುಹ್ಯಾರ್ಥಾನಾಂ ಸಹಸಾ ಅವಚನೀಯಾತ್' ಎಂಬುದರಿಂದಲೂ ಪೂರ್ವಾಚಾರ್ಯರುಗಳು ಇದನ್ನು ಅತ್ಯಂತ ಜಾಗರೂಕತೆಯಿಂದ ಗುಪ್ತವಾಗಿ ರಕ್ಷಿಸಿಕೊಂಡು ಬಂದದ್ದರಿಂದಲೂ ಇವುಗಳು ರಹಸ್ಯಗಳು ಎಂದೇ ಪ್ರಸಿದ್ಧವಾಯಿತು.

ಇಂತಹ ಸರ್ವೋತ್ಕೃಷ್ಟವಾದ ರಹಸ್ಯತ್ರಯಗಳ ವಿವರಣರೂಪ ಗಳಾಗಿರುವ ಗ್ರಂಥಗಳಲ್ಲಿಯೂ 'ರಹಸ್ಯಗಳು' ಎಂಬ ವ್ಯವಹಾರವೇ ಏರ್ಪಟ್ಟಿತು. ನಂತರ ಈ ಇದರಲ್ಲೇ

ರಹಸ್ಯತ್ರಯಗಳಿಂದ ಪ್ರತಿಪಾದಿಸಲ್ಪಡುವ ಆತ್ಮಸ್ವರೂಪ, ಪರಸ್ವರೂಪ, ಉಪಾಯಸ್ವರೂಪ, ಪ್ರಾಪ್ತಿ ಸ್ವರೂಪ, ವಿರೋಧಿಸ್ವರೂಪಗಳೆಂಬ ಅರ್ಥಪಂಚಕಗಳನ್ನು ವಿವರಿಸುವ ಗ್ರಂಥಗಳಿಗೂ, ಅವುಗಳಿಗೆ ಸಹಾಯಕವಾದ ಅರ್ಥಗಳನ್ನು ನಿರೂಪಿಸುವ ಗ್ರಂಥಗಳಿಗೂ 'ರಹಸ್ಯ ಗ್ರಂಥಗಳು' ಎಂಬು ದಾಗಿಯೇ ಪ್ರಸಿದ್ಧಿಯುಂಟಯಿತು.

ಈ ರಹಸ್ಯಗ್ರಂಥಗಳು ಪ್ರಥಮತಃ ಶ್ರೀ ವೈಷ್ಣವ ಸಂಪ್ರದಾಯದಲ್ಲೇ ಅವತರಿಸಿದವು. ಅತಿರಹಸ್ಯವಾಗಿ, ಅನರ್ಘ್ಯವಾಗಿ ಗರಿಮೆಯುಳ್ಳ ಮಹಾರ್ಥಗಳನ್ನು ತಮ್ಮ ಸಾಧನೆಗಳಿಂದ ಅರಿತು ಉಜ್ಜೀವಿಸುವುದಲ್ಲದೆ, ತಮ್ಮಂತೆಯೇ ಸಕಲರೂ ಅರಿತು ಉಜ್ಜೀವಿಸಬೇಕೆಂಬ ಪರಮ ಕೃಪಾ ಔದಾರ್ಯ ವಾತ್ಸಲ್ಯಗಳಿಂದ ತಮ್ಮನ್ನು ಆಶ್ರಯಿಸುವವರಿಗೆ ಮಹಾನ್‌ಗಳಾದ ಆಚಾರ್ಯರುಗಳು ಉಪದೇಶಿಸುವ ಅರ್ಥವಿಶೇಷಗಳೇ ಈ 'ರಹಸ್ಯಗಳು '.

ಇದನ್ನು ಸಾಂಪ್ರದಾಯಿಕವಾಗಿ ಪರಿಗ್ರಹಿಸಿ ಅನುಸಂಧಾನ ಮಾಡುವ ಅಧಿಕಾರಿ ದುರ್ಲಭತ್ವದಿಂದಲೂ ಇವುಗಳ ಅರ್ಥ ಗೌರವಗಳಿಂದಲೂ ಇದನ್ನು ಬಹಿರಂಗಪಡಿಸದೇ ಗುಪ್ತವಾಗಿಯೇ ಕಾಪಾಡಿಕೊಂಡು ಬಂದವರು ಭಗವದ್ರಾಮಾನುಜಾಚರ್ಯರಿಗಿಂತ ಹಿಂದೆ ಇದ್ದ ಪೂರ್ವಾಚರ್ಯರುಗಳು. ಆದರೆ ಸಂಸಾರಿಗಳ ದುರ್ಗತಿಯನ್ನು ಕಂಡು ಸಹಿಸಲಾರದೆ 'ಕಾರೇಯ್ ಕರುಣೈ ಇರಾಮಾನುಶಾ' ಎಂಬಂತೆ ಕರುಣೆಯೇ ಮೂರ್ತಿವೆತ್ತ ಆಚಾರ್ಯರಾಮಾನುಜರು ಈ ಅರ್ಥಗಳ ಹಿರಿಮೆಯನ್ನು ನೋಡದೆ ಸಂಸಾರಿಗಳ ಅನರ್ಥವನ್ನು ಕಂಡು ಇದನ್ನು ಎಲ್ಲರಿಗೂ ಉಪದೇಶಿಸಿ 'ಕೃಪಾಮಾತ್ರ ಪ್ರಸನ್ನಾಚಾರ್ಯರ್' ಎಂಬ ಬಿರುದಿಗೆ ಪಾತ್ರರಾದರು.

ಈ ರೀತಿ ಉಪದೇಶ ಮಾತ್ರ ನೀಡುವುದಲ್ಲದೆ ಈ ಅರ್ಥಗಳನ್ನು ದೇಶಕಾಲಾದಿ ವಿಭಾಗರಹಿತವಾಗಿ ಸರ್ವರೂ ಅರಿತು ಉಜ್ಜೀವಿಸಬೇಕೆಂಬ ವಿಶೇಷವಾದ ಪರಮಕೃಪೆಯಿಂದ ಸಂಗ್ರಹ ವಿಸ್ತರೇಣ ಹಲವು ಗ್ರಂಥಗಳನ್ನು ನೀಡಿದ ಕರುಣಾಮೂರ್ತಿ ''ಸ್ವಾಮಿಪಿಳ್ಳೈಲೋಕಾಚಾರ್ಯರು'' ಪ್ರಕಾಂಡ ಪಂಡಿತರಾಗಿ ಸದಾಚಾರ ಸಂಪನ್ನರಾಗಿ ನೈಷ್ಠಿಕ ಬ್ರಹ್ಮಚಾರಿಯಾಗಿದ್ದು, ಶ್ರೀ ವೈಷ್ಣವ ಲಕ್ಷಣ ಪೂರ್ತಿಯೊಡಗೂಡಿದ ಈ ಮಹಾನುಭಾವರಿಗೆ ಮಾತ್ರವೇ ಸಾಧ್ಯವಾಗುವಂತಹುದು ಈ ರಹಸ್ಯಗ್ರಂಥ ರಚನಾಕಾರ್ಯ.

ಶ್ರೀ ವೈಷ್ಣವ ವಾಙ್ಮಯದಲ್ಲಿ ಈ ರಹಸ್ಯಗ್ರಂಥಗಳ ಸ್ಥಾನ ಅಮೂಲ್ಯವಾದದ್ದು. ಸೂತ್ರರೂಪದಲ್ಲಿ ಇಲ್ಲಿ ರಹಸ್ಯಗಳು ವ್ಯಕ್ತವಾಗಿವೆ. ಸಂಸ್ಕೃತ ದ್ರಾವಿಡ ವೇದಗಳ ಸಾರತಮಾಂಶಗಳನ್ನು ನಿರ್ದಿಷ್ಟವಾಗಿ ನಿರೂಪಿಸುವ ಈ ಗ್ರಂಥಗಳು ಉಭಯವೇದಾಂತ ಸಂಪ್ರದಾಯದ ಸೂತ್ರ ಪ್ರಸ್ಥಾನವಾಗಿದೆ. ಕೇವಲ ಉಪದೇಶ ಪರಂಪರಾ ಪ್ರಾಪ್ತವಾದ ಅನರ್ಘ್ಯ ರಹಸ್ಯರತ್ನಗಳೆಲ್ಲವನ್ನೂ ಒಂದೇ ಸ್ಥಳದಲ್ಲಿ ಕೂಡಿಸಿ, ಪೋಣಿಸಿ ರಹಸ್ಯಗ್ರಂಥ ಮಾಲೆಯನ್ನು ರಚಿಸಿದವರಿಗೆಲ್ಲಾ ಮಾರ್ಗದರ್ಶಿಯಾದವರು 'ಶ್ರೀಪಿಳ್ಳೈಲೋಕಾಚಾರ್ಯರು'. ಇವರ ನಂತರ ಇವರ ವಿಶೇಷ ಪ್ರಭಾವದಿಂದ ಅನೇಕ ಆಚಾರ್ಯರುಗಳು ಇಂತಹ ಹಲವು ಗ್ರಂಥಗಳನ್ನು ರಚಿಸಿದರು.

'ತಿರುಕೋಟ್ಟಿಯೂರ್ ನಂಬಿ ರಹಸ್ಯಂಗಳ್', 'ನಂಜೀಯರ್ ರಹಸ್ಯಂಗಳ್' ಮೊದಲಾದ ಕೆಲವು ರಹಸ್ಯಗಳು ಇವರಿಗೆ ಪೂರ್ವದಲ್ಲೇ ದೊರೆಯುತ್ತವೆ. ಆದರೆ ಅವುಗಳು ಆಯಾ ಆಚಾರ್ಯಗಳಿಂದಲೇ ರಚಿಸಲ್ಪಟ್ಟದ್ದೇ ಅಥವಾ ಅನಂತರ ಬಂದವರು ರಚಿಸಿರುವುದೇ ಎಂಬುದಾಗಿ ಸಂದೇಹಾಸ್ಪದವಾಗಿದೆ.

ಶ್ರೀ ಪಿಳ್ಳೈಲೋಕಾಚಾರ್ಯರವರ ತಂದೆಯವರಾದ ಶ್ರೀ ವಡಕ್ಕು ತಿರುವೀದಿಪಿಳ್ಳೈಯವರ ಸಹಾಧ್ಯಾಯಿಯಾಗಿ, ಸ್ವಾಮಿ ನಂಬಿಳ್ಳೈಯವರಿಗೆ ದಕ್ಷಿಣ ನೇತ್ರಸ್ಥಾನೀಯರಾದ 'ವ್ಯಾಖ್ಯಾನ ಚಕ್ರವರ್ತಿ' ಎಂದು ಬಿರುದಾಂಕಿತ ರಾದ ಶ್ರೀಪೆರಿಯವಾಚ್ಚಾನ್ ಪಿಳ್ಳೈಯವರು 'ನಿಗಮನಪ್ಪಡಿ' , 'ಪರನ್ದರಹಸ್ಯಂ' ಮೊದಲಾದ ಕೆಲವು ರಹಸ್ಯಗ್ರಂಥಗಳನ್ನು ಅನುಗ್ರಹಿಸಿರುವುದು ಕಂಡು ಬರುತ್ತದೆ. ಆದರೂ ಈ ರಹಸ್ಯಗ್ರಂಥಗಳನ್ನು ಅನುಸರಿಸಿ ಒಂದು ವಿಶೇಷವಾದ ಕ್ರಮದಲ್ಲಿ ಪಾಮರರೂ ಅರಿಯುವಂತಹ ಸುಲಭ ಶೈಲಿಯಲ್ಲಿ ಮಣಿಪ್ರವಾಳ ಭಾಷೆಯಲ್ಲಿ ಈ ರಸಹ್ಯಗ್ರಂಥಗಳು ಅವತರಿಸಿರುವುದಕ್ಕೆ ಕಾರಣರಾದವರು 'ಮಧುಮಯ ಫಣಿತಿ ಮಾರ್ಗದರ್ಶಿ ಮಹರ್ಷಿಕಲ್ಪ'ರಾದ ಶ್ರೀ ಪಿಳ್ಳೈಲೋಕಾಚಾರ್ಯರ್ ಎಂಬುದರಲ್ಲಿ ಸಂದೇಹವಿಲ್ಲ.

ಈ ರಹಸ್ಯಗಳು ಮೃದು ಮಧುರಗಂಭೀರವಾದ ಮಣಿ ಪ್ರವಾಳ ಶೈಲಿಯಲ್ಲಿ ರಚಿಸಲ್ಪಟ್ಟಿವೆ. ಸುಧಾಮಯ ಸಂಸ್ಕೃತವೂ, ಮಧುಮಯವಾದ ತಮಿಳೂ ಕೂಡಿದ ಪರಮಭೋಗ್ಯವಾದ ಅತಿವಿಲಕ್ಷಣವಾದ ಶೈಲಿಯೇ ಮಣಿ ಪ್ರವಾಳ ಶೈಲಿಯಾಗಿದೆ. ಸಾಮನ್ಯರಿಗೂ ತಮ್ಮ ಉಪದೇಶಗಳು ಸುಲಭಭೋಧವಾಗುವುದಕ್ಕಾಗಿಯೂ ಮನಸ್ಸಿಗೆ ಭೋಗ್ಯವಾಗಿರುವುದ ಕ್ಕಾಗಿಯೂ ಕೇವಲ ತಮಿಳನ್ನೂ ಕೇವಲ ಸಂಸ್ಕೃತವನ್ನೂ ಬಿಟ್ಟು ಮಣಿಪ್ರವಾಳವನ್ನು ನಮ್ಮ ಆಚಾರ್ಯರುಗಳು ಸ್ವೀಕಾರ ಮಾಡಿದ್ದಾರೆ.

ಆಳ್ವಾರುಗಳ ದಿವ್ಯ ಪ್ರಬಂಧಗಳ ರಸವರಿತು ತನ್ಮಯರಾಗಿ ಅನುಭವಿಸಿ ಅನುಭವಿಸಿ ಆ ಅನುಭವರಸವು ಒಳಗೆ ಅಡಗಲಾರದೆ ಆ ಮೃದು ಮಧುರವಾದ ಭೋಗ್ಯಾಮೃತವನ್ನು ಸರ್ವರಿಗೂ ಅನುಗ್ರಹಿಸಿ, ಸರ್ವರೂ ಆ ಅನುಭವ ಪಡೆದು ಉಜ್ಜೀವಿಸುಂತೆ ಕೃಪೆ ಮಾಡಿದರು. 'ಶ್ರೀಮನ್ನಾಥಮುನಿಗಳು', 'ನಾಥೋಪಜ್ಞಂ ಪ್ರವೃತ್ತಂ' ಎಂಬಂತೆ ಸಂಸ್ಕೃತ ದ್ರಾವಿಡ ವೇದಗಳನ್ನು ಇವರು ಪ್ರವರ್ತನ ಮಾಡಿದರಂತೆ, ಸಂಸ್ಕೃತ ದ್ರಾವಿಡ ಮಿಶ್ರಣವಾದ ಈ ಮಣಿ ಪ್ರವಾಳವನ್ನೂ ಉಭಯ ಭಾಷಾಪಾರಂಗತರಾದ್ದರಿಂದ ಪ್ರವರ್ತನ ಮಾಡಿದರೆಂದು ಊಹಿಸಬಹುದು. ಅಂದಿನಿಂದ ಪರಂಪರಾಗತವಾಗಿ ಬಂದ ನಮ್ಮ ಆಚಾರ್ಯರೆಲ್ಲರೂ ಶ್ರೀ ಮನ್ನಾಥಮುನಿಗಳು ಅನುಗ್ರಹಿಸಿದ ಈ ಪರಮವಿಲಕ್ಷಣ ರಚನೆಯನ್ನಾಧರಿಸಿ ಅಭಿವೃದ್ಧಿಪಡಿಸಿ, ಅನುಭವಿಸಿ ರೂಢಿಸಿದ್ದಾರೆ.

ನಮ್ಮ ಪೂರ್ವಚಾರ್ಯರುಗಳನ್ನು ಅನುಸರಿಸಿ ಜೈನರೇ ಮೊದಲಾದ ಇತರ ಮತಾಚಾರ್ಯರೂ ಮಣಿಪ್ರವಾಳದಲ್ಲಿ ತಮ್ಮ ಗ್ರಂಥಗಳನ್ನು ರಚಿಸಿದ್ದಾರೆ. ಒಂಭತ್ತನೇ ಶತಮಾನದ ತಮಿಳು ಪ್ರಬಂಧ 'ಜೀವಚಿಂತಾಮಣಿ' ಯನ್ನು ಆಧಾರಿಸಿದ 'ಶ್ರೀ ಪುರಾಣ' ಎಂಬ ಜೈನಗ್ರಂಥವು ಮಣಿ ಪ್ರವಾಳದಲ್ಲಿ ರಚಿಸಲ್ಪಟ್ಟಿದೆ. ಹತ್ತನೇ ಶತಮಾನದ ಕೆಲವು ಶಾಸನಗಳು

ಇದೆ. ಹನ್ನೊಂದನೇ ಶತಮಾನದ ಗ್ರಂಥವಾದ 'ವೀರಚೋೞಿಯನ್ ಇಲಕ್ಕಣಂ' ಎಂಬ ವ್ಯಾಕರಣಗ್ರಂಥದ 180ನೇ ಸೂತ್ರವು ಮಣಿಪ್ರವಾಳದ ಲಕ್ಷಣವನ್ನು ತಿಳಿಸುತ್ತದೆ. ಇದನ್ನು ತಮಿಳಿನಲ್ಲಿ ಇದನ್ನು 'ಮಣಿಮಿಡೈಪ್ಪವಳಂ' ಎನ್ನಲಾಗುತ್ತದೆ. ಹನ್ನೊಂದನೇ ಶತಮಾನದಲ್ಲಿ ವಿರಾಜಮಾನರಾಗಿದ್ದಂತಹ ಶ್ರೀಭಾಷ್ಯಕಾರ ಆಚಾರ್ಯರಾಮಾನುಜರಿಗೆ ಅಂತರಂಗ ಶಿಷ್ಯರಾಗಿ ಪುತ್ರಸ್ಥಾನೀಯರಾಗಿದ್ದ 'ಯತಿರಾಜಾಬ್ಧಿ ಚಂದ್ರಿಮ' ಎಂದು ಕೀರ್ತಿವೆತ್ತ ತಿರುಕ್ಕುರುಹೈಪ್ಪಿರಾನ್‌ಪಿಳ್ಳಾನ್, 'ಆರಾಯಿರಪ್ಪಡಿ' ಎಂಬ ತಮ್ಮ ತಿರುವಾಯ್ಮೊೞಿ ವ್ಯಾಖ್ಯಾನವನ್ನು ಮಣಿಪ್ರವಾಳದಲ್ಲಿಯೇ ಅನುಗ್ರಹಿಸಿದ್ದಾರೆ. ನಂಜೀಯರ್‌ರವರ ಒಮ್ಬದಾಯಿರಪ್ಪಡಿ, ಪೆರಿಯವಾಚ್ಚಾನ್ ಪಿಳ್ಳೈ ಅವರ ಇರುಪತ್ತುನಾಲಾಯಿರಪ್ಪಡಿ, ನಂಬಿಳ್ಳೈಯವರ ಈಡುಮುಪ್ಪತ್ತಾರಾಯಿರಪ್ಪಡಿ ಮೊದಲಾದ ಒಂದು ವ್ಯಾಖ್ಯಾನ ಪ್ರವಾಹವೇ ಮಣಿಪ್ರವಾಳದಲ್ಲಿದೆ. ಇವರೆಲ್ಲರನ್ನೂ ಅನುಸರಿಸಿ ಪರಮ ಪ್ರಾಮಾಣಿಕರಾದ ಶ್ರೀಪಿಳ್ಳೈಲೋಕಾಚಾರ್ಯರು ತಮ್ಮ ಹದಿನೆಂಟು ರಹಸ್ಯಗ್ರಂಥಗಳನ್ನೂ ಮಣಿಪ್ರವಾಳದಲ್ಲಿಯೇ ಅನುಗ್ರಹಿಸಿದ್ದಾರೆ.

ಈ ರಹಸ್ಯಗ್ರಂಥಗಳು ವಕ್ತೃ ವೈಲಕ್ಷಣ್ಯದಿಂದಲೂ, ವಿಷಯ ವೈಲಕ್ಷಣ್ಯದಿಂದಲೂ ಪ್ರಬಂಧ ವೈಲಕ್ಷಣ್ಯದಿಂದಲೂ ಸರ್ವೋತ್ಕೃಷ್ಟವಾಗಿ ಬೆಳಗುತ್ತಿದೆ.

ಈ ಅಷ್ಟಾದಶರಹಸ್ಯವಕ್ತಾರರಾದ ಶ್ರೀ ಪಿಳ್ಳೈಲೋಕಾಚಾರ್ಯರ ವೈಭವವು 'ಯತೀಂದ್ರ ಪ್ರವಣ ಪ್ರಭಾವ' ದಲ್ಲಿಯೂ 'ಪೆರಿಯತಿರುಮುಡಿ ಅಡೈವು' ಗ್ರಂಥಗಳಲ್ಲಿಯೂ ವಿವರವಾಗಿ ನಿರೂಪಿಸಲ್ಪಟ್ಟಿದೆ.

ಆಚಾರ್ಯರ ಅವತಾರಸ್ಥಳ - ಶ್ರೀರಂಗದಿವ್ಯಕ್ಷೇತ್ರ

ಅವತಾರ ಕಾಲ - ಕ್ರೋಧನ ಸಂವತ್ಸರ / ಸರ್ವಧಾರೀ ಸಂವತ್ಸರ , ತುಲಾಮಾಸ, ಶ್ರವಣ ನಕ್ಷತ್ರ

ಕುಲ - ವಡಮಾಳ್

ಕುಡಿ - ಮುಡುಂಬೈ

ಪ್ರವರ - ಶ್ರೀವತ್ಸಗೋತ್ರ , ಆಪಸ್ತಂಬ ಸೂತ್ರ, ಯಜುಸ್ ಶಾಖೆ.

ಪಂಚ ಸಂಸ್ಕಾರ ಅನುಗ್ರಹಿಸಿದವರು - ಮಹಾಚಾರ್ಯರಾದ ಸ್ವಾಮಿನಂಬಿಳ್ಳೈ

ಉಭಯವೇದಾಂತ ಕಾಲಕ್ಷೇಪ ಆಚಾರ್ಯರು - ಸ್ವತಃ ತಂದೆಯವರಾದ ವಡಕ್ಕು ತಿರುವೀದಿಪ್ಪಿಳ್ಳೈ, ಹಾಗೂ ಪೆರಿಯವಾಚ್ಚಾನ್‌ಪಿಳ್ಳೈ

ತಮ್ಮ - ಅೞಹಿಯಮಣವಾಳಪ್ಪೆರುಮಾಳ್ ನಾಯನಾರ್

ತಂದೆ ಮತ್ತು ತಾಯಿ - ವಡಕ್ಕು ತಿರುವೀದಿಪ್ಪಿಳ್ಳೈ ಮತ್ತು ಶ್ರೀರಂಗನಾಚ್ಚಿಯಾರ್

ಪ್ರಮುಖ ಶಿಷ್ಯರು - ತಮ್ಮ ಅಳಹಿಯಮಣವಾಳಪ್ಪೆರುಮಾಳ್ ನಾಯನಾರ್, ಕೂರಕುಲೋತ್ತಮ ದಾಸರ್ ನಾಯನಾರ್, ತಿರುವಾಯ್ಮೊಳಿಪಿಳ್ಳೈ (ಶ್ರೀಶೈಲರ್), ವಿಳಾಂಶೋಲೈಪ್ಪಿಳ್ಳೈ, ಮಣಲ್‌ಪಾಕತ್ತುಪ್ಪಿಳ್ಳೈ ಮುಂತಾದವರು.

ಈ ಮೇಲಿನ ವಿಷಯಗಳು 'ಪೆರಿಯ ತಿರುಮುಡಿ ಅಡೈವು' ಎಂಬ ವಂಶಪರಂಪರಾ ನಿರೂಪಕ ಗ್ರಂಥದಲ್ಲಿ ದೊರೆತ ವಿವರಗಳು.

'ಯತೀಂದ್ರ ಪ್ರವಣ ಪ್ರಭಾವ' ವೆಂಬ ಸ್ವಾಮಿ ಮಣವಾಳಮಾಮುನಿಗಳ ದಿವ್ಯಚರಿತ್ರೆಯನ್ನು ನಿರೂಪಿಸುವ ಗ್ರಂಥದಲ್ಲಿ ಸ್ವಾಮಿಪಿಳ್ಳೈಲೋಕಾಚಾರ್ಯರ ಅವತಾರ ವೈಭವದ ಬಗ್ಗೆ ಒಂದು ಐತಿಹ್ಯವನ್ನು ಕಾಣಬಹುದು.

ಸ್ವಾಮಿ ನಮ್ಮಾಳ್ವಾರ್‌ರವರ ಅವತಾರವೆಂದು ಪ್ರಸಿದ್ಧಿಯುಳ್ಳ ಸ್ವಾಮಿ ನಂಬಿಳ್ಳೈ ಒಂದು ದಿನ ಕಾಲಕ್ಷೇಪಾದಿಗಳನ್ನು ನೆರವೇರಿಸಿ ಮಧ್ಯಾಹ್ನದ ವೇಳೆ ಏಕಾಂತದಲ್ಲಿ ಬಿಜಯ ಮಾಡಿಸಿರುವಾಗ ವಡಕ್ಕುತ್ತಿರುವೀದಿಪ್ಪಿಳ್ಳೈ ಅವರ ತಾಯಿ ಅಮ್ಮಿಯವರು ಆಗಮಿಸಿ ನಮಸ್ಕರಿಸಿ ನಿಂತರು. ಆಗ ಸ್ವಾಮಿ ನಂಬಿಳ್ಳೈಯವರ ಮನೆಯ ಯೋಗಕ್ಷೇಮಾದಿಗಳನ್ನು ವಿಚಾರಿಸಿದಾಗ ಅಯ್ಯೋ ನಾನೊಬ್ಬ ಹುಚ್ಚನನ್ನು ಮಗನಾಗಿ ಪಡೆದಿದ್ದೇನಲ್ಲಾ ಎನ್ನಲು ಅದೇಕೆ ಎಂದು ವಿಚಾರಿಸುತ್ತಾರೆ. ಆಗ ಅಮ್ಮಿಯವರು 'ತಮ್ಮ ನಿಯಮನದಂತೆಯೇ ನನ್ನ ಪುತ್ರನಿಗೆ ವಿವಾಹ ಮಾಡಿದೆ. ಆದರೆ ಒಂದು ದಿನವೂ ಪತ್ನಿಯೊಡನೆ ನನ್ನ ಪುತ್ರ ಸಹಶಯ್ಯೆ ಯಲ್ಲಿರಲಿಲ್ಲ. ಪತ್ನಿಯನ್ನು ಏಕಾಂತದಲ್ಲಿ ಕಂಡೊಡನೆ ಸರ್ಪ, ಸರ್ಪ ಎಂದು ಅಂಜಿ ಓಡಿಹೋಗುತ್ತಾನೆ. ಆ ಹೆಣ್ಣಿನ ಗತಿಯೇನು? ನಮ್ಮ ವಂಶದ ಗತಿಯೇನು? ವಂಶೋದ್ಧಾರ ಆಗಬೇಡವೇ ? ನಿಮ್ಮನೇ ಆಶ್ರಯಿಸಿದ್ದೇನೆ' ಎಂದು ವ್ಯಾಕುಲಗೊಂಡು ಹೇಳುತ್ತಾರೆ. ಆಗ ಕರುಣಾಪೂರ್ಣರಾದ ಶ್ರೀ ನಂಬಿಳ್ಳೈಯವರು, 'ತಾಯಿ ದುಃಖಿಸಬೇಡ ಋತುಸ್ನಾತಳಾದ ದಿನದಂದು ನಿಮ್ಮ ಸೊಸೆಯನ್ನು ನನ್ನನ್ನು ಬಂದು ಕಾಣುವಂತೆ ತಿಳಿಸು' ಎಂದರು. ಅದೇ ರೀತಿ ಆ ಸೊಸೆ ಬಂದು ನಂಬಿಳ್ಳೈಯವರನ್ನು ನಮಸ್ಕರಿಸಿದಾಗ ಆಕೆಯ ಉದರವನ್ನು ಸ್ಪರ್ಶಿಸಿ 'ನಮ್ಮಂತೆಯೇ ಇರುವ ಪುತ್ರನನ್ನು ಪಡೆಯುತ್ತೀಯ' ಎಂದು ಆಶೀರ್ವದಿಸಿದರು. ನಂತರ ವಡಕ್ಕುತಿರುವೀದಿಪಿಳ್ಳೈಯವರನ್ನು ಕರೆದು ನಿಮ್ಮ ಅಂಜಿಕೆ ದೂರವಾಯಿತು. ಶ್ರೀ ವೈಷ್ಣವನಿಗೆ ಅತಿಮುಖ್ಯವಾದ ವಿಹಿತ ವಿಷಯನಿವೃತ್ತಿಗೂ ಅಡಚಣೆ ಬರುವುದಿಲ್ಲ. ಆದರೆ ಲೋಕಮರ್ಯಾದೆಯಾಗಿ ಈ ದಿನ ನೀವು ನಿಮ್ಮ ಪತ್ನಿಯೊಡನಿರಬೇಕು ಎಂದು ಶಿಷ್ಯನಿಗೆ ನಿಯಮಿಸಿದರು. ಅದೇ ರೀತಿ ವಡಕ್ಕುತ್ತಿರುವೀದಿಪಿಳ್ಳೈಯವರು ಆಚಾರ್ಯನಿಯಮನವನ್ನು ಶಿರಾಸಾವಹಿಸಿ ಹಾಗೆಯೇ ನಡೆದುಕೊಂಡರು. ನಂತರ ಅವರ ಪತ್ನಿಯಾದ ಶ್ರೀರಂಗನಾಚ್ಚಿಯಾರ್ ಗರ್ಭಧರಿಸಿ ಲೋಕ ವಿಲಕ್ಷಣವಾಗಿ ಹನ್ನೆರಡನೆಯ ಮಾಸದಲ್ಲಿ ತೇಜೋವಿಶಿಷ್ಟನಾದ ಪುತ್ರರತ್ನವನ್ನು ಪ್ರಸವಿಸಿದರು. **ತುಲಾಮಾಸ, ಶ್ರವಣನಕ್ಷತ್ರ**ದಲ್ಲಿ ವಿಲಕ್ಷಣವಾಗಿ ಅವತರಿಸಿದ ಆ ಶಿಶುವೇ ಮಹಾನುಭಾವರಾದ ಸ್ವಾಮಿ ಪಿಳ್ಳೈಲೋಕಾಚಾರ್ಯರು.

ಸ್ವಾಮಿ ನಂಬಿಳ್ಳೈಯವರು ಕಂಚಿವರದರಾಜನ ಅವತಾರವೆಂಬ ಪ್ರತೀತಿಯೂ ಇರುವುದರಿಂದ ಸ್ವಾಮಿ ಪಿಳ್ಳೈಲೋಕಾಚಾರ್ಯರನ್ನು ಕಂಚೀವರದರಾಜನೆಂದೇ ಹೇಳಲಾಗುತ್ತದೆ. ಶ್ರೀ ಪಿಳ್ಳೈಲೋಕಾಚಾರ್ಯರ ಅರ್ಚಾವಿಗ್ರಹಕ್ಕೆ ಹಸ್ತಿಗಿರಿಮಹಾತ್ಮ್ಯದಲ್ಲಿರುವ ವರದರಾಜನ ಅಷ್ಟೋತ್ತರವನ್ನೇ ಹೇಳಿ ಅರ್ಚನೆ ಮಾಡುವ ಸಂಪ್ರದಾಯವನ್ನು ಈಗಲೂ ಕಾಣಬಹುದು.

**ಯಸ್ಯ ಸಾರಸ್ವತಂ ಶಾಸ್ತ್ರಂ ದಿವ್ಯಂ ವಚನಭೂಷಣವತ್ ।**

**ತಸ್ಮೈ ಹಸ್ತಿಗಿರೀಶಾಯ ಶ್ರೀ ಜಗದ್ಗುರವೇ ನಮಃ ॥** ಎಂಬ 'ಉತ್ತರಸೂರಿಚರಿತ'ದ ಶ್ಲೋಕದಲ್ಲಿ ಇವರನ್ನು '**ಹಸ್ತಿಗಿರೀಶ**' ಎಂದೇ ಸಂಬೋಧಿಸಿರುವುದು ಇವರು ವರದರಾಜನ ಅಪರಾವತಾರ ಎಂಬುದಕ್ಕೆ ಪೂರಕವಾಗಿದೆ.

ಹೀಗೆ ಸಾಕ್ಷಾತ್ತಾಗಿ ಭುವಿಗಿಳಿದ ಭಗವಂತನಾಗಿ ರಹಸ್ಯಗಳನ್ನು ಅನುಗ್ರಹಿಸಿದ ವಕ್ತಾ ಸ್ವಾಮಿ ಪಿಳ್ಳೈಲೋಕಾಚಾರ್ಯರೆಂಬುದು ಪಾರಂಪರಿಕವಾದ ನಂಬಿಕೆಯಾಗಿದೆ. ಶ್ರೀಮತ್ಪಿಳ್ಳೈಲೋಕಾಚಾರ್ಯರ ಸಂಪೂರ್ಣ ವಿವರಗಳನ್ನು ಅನೇಕ ಗ್ರಂಥಗಳಿಂದ ಸಂಗ್ರಹಿಸಿದ '**ಪಿಳ್ಳೈಲೋಕಾಚಾರ್ಯ**' ಎಂಬ ಶ್ರೀ ಅರೈಯರ್ ರಾಮಶರ್ಮರವರ ಕಿರುಪುಸ್ತಿಕೆಯಲ್ಲಿ ಇವರ ಬಗ್ಗೆ ಇನ್ನೂ ಹೆಚ್ಚಿನ ಇವರಗಳನ್ನು ಕಾಣಬಹುದಾಗಿದೆ.

ಮಹಾನುಭವರಾದ ಶ್ರೀ ಪಿಳ್ಳೈಲೋಕಾಚಾರ್ಯರು ಉಭಯವೇದ ಪರಂಪರೆಯ '**ಸೂತ್ರ ಪ್ರಸ್ಥಾನ**'ಕಾರಾಗಿದ್ದಾರೆ. ಸಂಸ್ಕೃತವೇದಾಂತಧ್ಯಯನ ಕಾರರಿಗೆ ಪ್ರಮಾಣಗಳಾಗಿರುವ ಉಪನಿಷತ್, ಬ್ರಹ್ಮಸೂತ್ರ, ಭಗವದ್ಗೀತೆ ಎಂಬ ಪ್ರಸ್ಥಾನತ್ರಯದಲ್ಲಿ ಬ್ರಹ್ಮಸೂತ್ರಗಳೆನಿಸಿದ ಬಾಧರಾಯಣ ಸೂತ್ರಗಳು ಸೂತ್ರ ಪ್ರಸ್ಥಾನವೆನಿಸಿದೆ. ಹಾಗೆಯೇ ಸಂಸ್ಕೃತ ದ್ರಾವಿಡ ಭಾಷಾಯುಗಳಮಯವಾದ, ಸಕಲ ವೇದಾಂತಗಳನ್ನೂ, ತದುಪಬೃಂಹಣಗಳಾದ ಸ್ಮೃತಿ ಇತಿಹಾಸ ಪುರಾಣ ಮೀಮಾಂಸಾದಿ ಶಾಸ್ತ್ರಗಳನ್ನೂ, ಆಳ್ವಾರ್ ಆಚಾರ್ಯರುಗಳ ಅಖಿಲ ಶ್ರೀಸೂಕ್ತಿಗಳನ್ನೂ, ತಮ್ಮ ಸುನಿಶ್ಚಿತ ಮೇಧಾ ಪ್ರಭಾವದಿಂದಲೂ ಹೃತ್ಪೂರ್ವಕವಾದ ಅನುಭವಗಳಿಂದಲೂ ಮಥಿಸಿ ಒಂದು ವಿಶೇಷವಾದ ಕ್ರಮದಲ್ಲಿ ಅಣಿಗೊಳಿಸಿ ಸಂಶಯ ವಿಪರ್ಯಯಗಳೊಂದೂ ಬಾರದಂತೆ '**ಅಷ್ಟಾದಶರಹಸ್ಯ**'ಗಳಲ್ಲಿ ಅನುಗ್ರಹಿಸಿದ್ದಾರೆ. ಈ ಹದಿನೆಂಟು ರಹಸ್ಯಗ್ರಂಥಗಳೂ ಸೂತ್ರ ರೂಪದಲ್ಲಿವೆ.

**ಅಲ್ಪಾಕ್ಷರಂ ಅಸಂದಿಗ್ಧಂ ಸಾರವತ್ ವಿಶ್ವತೋಮುಖಂ ।**

**ಅಸ್ತೋಭಮನವದ್ಯಂ ಚ ಸೂತ್ರಂ ಸೂತ್ರವಿದೋ ವಿದುಃ ॥**

ಎಂಬಂತಹ ವಿಶಿಷ್ಟಲಕ್ಷಣಗಳೊಡಗೂಡಿದ ಸೂತ್ರಗ್ರಂಥಗಳು ಅನುಪಮವಾದ ಉಭಯವೇದಾಂತ ಸೂತ್ರ ಪ್ರಸ್ಥಾನ ಸ್ಥಾನವನ್ನು ಅಲಂಕರಿಸಿದೆ.

ಈ ರಹಸ್ಯಗ್ರಂಥಗಳ ಸಂಖ್ಯೆ '**ಹದಿನೆಂಟು**' ಈ ಸಂಖ್ಯೆಯು ಅನೇಕ ರಹಸ್ಯಗಳ ಆಗರವಾಗದೆ. ಆಚಾರ್ಯರು ನ್ಯೂನಾಧಿಕತೆ ಇಲ್ಲದ ಹದಿನೆಂಟೇ ರಹಸ್ಯಗಳನ್ನು ರಚಿಸಿರುವ ಹಿನ್ನಲೆಯನ್ನು ನಮ್ಮ ಪೂರ್ವಾಚಾರ್ಯರುಗಳು ಹಲವು ವಿಧವಾಗಿ ವಿವರಿಸಿದ್ದಾರೆ. ಅವುಗಳನ್ನು ಈ ಕೆಳಕಂಡಂತೆ ಕ್ರೋಢೀಕರಿಸಬಹುದು.

1) ಶ್ರೀಮದ್ವಿಶಿಷ್ಟಾದ್ವೈತ ಸಂಪ್ರದಾಯದಲ್ಲಿ ಪ್ರಸಿದ್ಧವಾದ ಶ್ರೀ ಭಾಷ್ಯಾದಿ ಗ್ರಂಥಗಳಲ್ಲಿ ಪ್ರಮಾಣಗಳಾಗಿ ಉದಾಹರಿಸಲ್ಪಟ್ಟ ಉಪನಿಷತ್ತುಗಳು ಹದಿನೆಂಟು.

2) ಈ ವೇದಾಂತ ಭಾಗದ ಉಪಬೃಂಹಣಗಳಾದ ಪುರಾಣಗಳು ಹದಿನೆಂಟು.

3) ಎಲ್ಲ ಉಪನಿಷತ್ತುಗಳ ಸಂಗ್ರಹರೂಪವಾಗಿ ಪ್ರಥಮ ಸ್ಥಾನದಲ್ಲಿರುವಂತಹುದಾಗಿ ತತ್ತ್ವ ಹಿತ, ಪುರಷಾರ್ಥಗಳನ್ನು ಪರಮನಿಷ್ಕೃಷ್ಟವಾಗಿ ಉಪದೇಶಿಸುವ ಈಶಾವಾಸ್ಯೋಪನಿಷತ್ತಿನಲ್ಲಿರುವ ಋಕ್ಕುಗಳು ಹದಿನೆಂಟು.

4) ಇತಿಹಾಸ ಶ್ರೇಷ್ಠವೆನಿಸಿ 'ಭಾರತಃ ಪಂಚಮೋ ವೇದಃ' ಎಂದು ಖ್ಯಾತಿವೆತ್ತ ಮಹಾಭಾರತದಲ್ಲಿರುವ ಪರ್ವಗಳ ಸಂಖ್ಯೆ 18.

5) ಮಹಾಭಾರತದ ಸಾರವಾಗಿ ಈಶಾವಾಸ್ಯೋಪನಿಷತ್ತಿಗೆ ಸಾಕ್ಷಾದ್ವಿವರಣ ರೂಪವಾಗಿ ಪರಮಪ್ರಸಿದ್ಧವಾದ ಭಗವದ್ಗೀತೆಯಲ್ಲಿರುವ ಅಧ್ಯಾಯಗಳ ಸಂಖ್ಯೆ 18.

6) ಉಪವೇದಗಳೊಡನೆ ಕೂಡಿದ ವಿದ್ಯಾಸ್ಥಾನಗಳು 18.

ಈ ಎಲ್ಲ ಅಂಶಗಳನ್ನು ಮನದಲ್ಲಿ ಕೊಂಡ ಶ್ರೀಮತ್ಪಿಳ್ಳೈ ಲೋಕಾಚಾರ್ಯರು ಅನುಗ್ರಹಿಸಿದ ರಹಸ್ಯಗಳ ಸಂಖ್ಯೆ 18 ಎನ್ನಬಹುದು. ಇವೆಲ್ಲವೂ 'ಹದಿನೆಂಟು' ಎಂಬ ಸಂಖ್ಯೆಯಲ್ಲಿರುವುದಕ್ಕೆ ಏನೋ ಒಂದು ಮಹತ್ತರವಾದ ಉದ್ದೇಶವಿರಲೇಬೆಕು. ಅದು ಏನೆಂಬುದನ್ನು ನಿರ್ದಿಷ್ಟವಾಗಿ ಹೇಳಲಾಗದಿದ್ದರೂ ಇದರಲ್ಲಿ ಕೆಲವು ರಹಸ್ಯಗಳು ಅಂತರ್ಗತವಾಗಿದೆಯೆಂದು ನಿಶ್ಚಯವಾಗಿ ಹೇಳಬಹುದು.

ಮಂತ್ರಶಾಸ್ತ್ರ ಪ್ರಕ್ರಿಯೆಯಲ್ಲಿ 'ಎಂಟು' ಮತ್ತು 'ಹತ್ತು' ಎಂಬ ಈ ಎರಡು ಸಂಖ್ಯೆಗಳ ಪ್ರಭಾವ, ಪ್ರಾಧಾನ್ಯ ಅಧಿಕವಾಗಿ ಕಂಡು ಬರುತ್ತದೆ. ಒಂದು ಮಂತ್ರವನ್ನು ನಿಯಮಾನುಸಾರ ಅನುಸಂಧಾನ ಮಾಡಬೇಕಾದ ಪ್ರಯೋಗಗಳಲ್ಲಿ ತತ್ತತ್ಸಮಯಾನುಗುಣವಾಗಿ ಎಂಟು ಆವೃತ್ತಿ, ಹತ್ತು ಆವೃತ್ತಿ, ಹದಿನೆಂಟು ಆವೃತ್ತಿ, ಇಪ್ಪತ್ತೆಂಟು ಆವೃತ್ತಿ, ನೂರೆಂಟು ಆವೃತ್ತಿ, ಸಾವಿರದೆಂಟು ಆವೃತ್ತಿಗಳು ಹೇಳಲ್ಪಟ್ಟಿವೆ. ಭಗವನ್ನಾಮ ಸಂಕೀರ್ತನಗಳಲ್ಲೂ, ಅಷ್ಟೋತ್ತರಶತಗಳು ಉತ್ಕೃಷ್ಟವಾದವುಗಳಾಗಿವೆ. ಆತ್ಮ ಸಾಕ್ಷಾತ್ಕಾರಕ್ಕೆ ಸಾಧನವಾದ ಯೋಗವೂ ಅಷ್ಟಾಂಗವಿಶಿಷ್ಟವಾಗಿದೆ. ಭಗವನ್ಮಂತ್ರಗಳಲ್ಲಿ ಪ್ರಧಾನವಾದ ತಿರುಮಂತ್ರವೂ ಎಂಟು ಅಕ್ಷರಗಳಿಂದ ಕೂಡಿದೆ. ಭಗವಂತನ ಸರ್ವಜ್ಞತ್ವಾದಿ ಗುಣಾಷ್ಟಕಗಳು ಸರ್ವದಾ ಅನುಸಂಧೇಯವಾಗಿದೆ.

ಹೀಗೆ 'ಎಂಟು' ವಿಶೇಷವುಳ್ಳದಾಗಿದೆ. ಪಾಣಿನೀಯ ವ್ಯಾಕರಣ ಗ್ರಂಥವೂ 'ಅಷ್ಟಾಧ್ಯಾಯಿ' ಆಗಿದೆ. ಅದೇ ರೀತಿ ಪ್ರಸಿದ್ಧವಾದ ಭಗವದವತಾರಗಳು ಹತ್ತು, ದ್ವಯ ಮಂತ್ರದಲ್ಲಿ ನಾರಾಯಣ ಶಬ್ದಕ್ಕೆ ಅರ್ಥವಾಗಿ ಹೇಳಲ್ಪಡುವ ವಾತ್ಸಲ್ಯಾದಿ ಗುಣಗಳು 'ಹತ್ತು'. ಆದ್ದರಿಂದ ಎಂಟು ಮತ್ತು ಹತ್ತು ಎಂಬ ಸಂಖ್ಯೆಗಳಿಗೆ ಮಂತ್ರ ಶಾಸ್ತ್ರದಲ್ಲಿ ಒಂದು ವಿಶೇಷ ಸ್ಥಾನವಿದೆ. ಇಂತಹ ಎರಡು ಸಂಖ್ಯೆಗಳನ್ನು ಸೇರಿಸಿ ಆಚಾರ್ಯರು ಹದಿನೆಂಟು ರಹಸ್ಯಗಳನ್ನು ಅನುಗ್ರಹಿಸಿರಬಹುದೇನೋ ಎನಿಸುತ್ತದೆ.

ತತ್ವಶಾಸ್ತ್ರಪ್ರಕ್ರಿಯಾನುಸಾರ ಸಾಂಖ್ಯಕಾರಿಕೆಯಲ್ಲಿ ಹೇಳಲ್ಪಡುವಂತೆ ಅಚಿತ್ ತತ್ವವು 'ಷೋಡಶಕಸ್ತು ವಿಕಾರಃ' ಎಂಬಂತೆ ಹದಿನಾರು ವಿಧವಾಗಿ ಪರಿಣಮಿಸುತ್ತದೆ. ನಂತರ ಚೇತನ ತತ್ವ ಒಂದು. ಪರಮಚೇತನ ತತ್ವ ಒಂದು. ಒಟ್ಟು ಸೇರಿ ಹದಿನೆಂಟು ತತ್ವಗಳನ್ನು ಪ್ರತಿಪಾದಿಸಲಾಗಿದೆ. ಅದೇ ರೀತಿ ಮಹಾಮಹಿಮರಾದ ಸ್ವಾಮಿ ಪಿಳ್ಳೈಲೋಕಾಚಾರ್ಯರೂ ಚಿದಚಿದೀಶ್ವರ ತತ್ವಗಳನ್ನು ಪ್ರತಿಪಾದಿಸುವ ರಹಸ್ಯಗಳನ್ನು ಹದಿನೆಂಟು ಸಂಖ್ಯೆಯಲ್ಲಿ ಅನುಗ್ರಹಿಸಿರಬಹುದಾದ ಸಾಧ್ಯತೆಗಳನ್ನು ಊಹಿಬಹುದಾಗಿದೆ.

ಅಲ್ಲದೆ ಧರ್ಮಸೂತ್ರಗಳಲ್ಲಿ ಚೇತನನಿಗೆ ಹೇಳಲ್ಪಡುವ ಕಲ್ಯಾಣ ಗುಣಗಳು ಎಂಟು ಇಪ್ಪತ್ತನಾಲ್ಕು ಸಂಸ್ಕಾರಗಳಿದ್ದರೂ ಇಲ್ಲದಿದ್ದರೂ ಈ ಎಂಟು ಆತ್ಮಗುಣಗಳಿದ್ದರೆ ಸಾಕೆಂದು 'ಗೌತಮಧರ್ಮ ಸೂತ್ರ'ವು ತಿಳಿಸುತ್ತದೆ.

ಹಾಗೆಯೇ ಪರಮಾತ್ಮನಿಗೆ ನಾರಾಯಣ ಪದದಿಂದ ಹೇಳಲ್ಪಡುವ ಕಲ್ಯಾಣಗುಣಗಳು ಹತ್ತು. ಆಶ್ರಯಣ ಸೌಕರ್ಯಾಪಾದಕಗಳಾದ ಈ ಗುಣಗಳು ಪ್ರಧಾನವೆಂದು ಪಾಂಚರಾತ್ರಾದಿ ಆಗಮಗಳೂ, ಆಳ್ವಾರುಗಳ ದಿವ್ಯಪ್ರಬಂಧ ಗಳೂ ಇವುಗಳನ್ನು ಕೊಂಡಾಡುತ್ತವೆ. ಸಾಮವೇದಸಾರವಾಗಿ ದೀರ್ಘ ಶರಣಾಗತಿ ಎಂದು ಪ್ರಸಿದ್ಧವಾದ ನಮ್ಮಾಳ್ವಾರರ ತಿರುವಾಯ್ಮೊಳಿಯ ಹತ್ತು ಶತಕಗಳೂ ಭಗವಂತನ ಹತ್ತು ಕಲ್ಯಾಣಗುಣಗಳನ್ನು ವರ್ಣಿಸುತ್ತವೆ.

ಆದ್ದರಿಂದ ಎಂಟು ಗೂಣಗಳನ್ನುಳ್ಳ ಆತ್ಮ, ಹತ್ತುಗುಣಗಳಿಂದ ಉಜ್ವಲನಾಗಿರುವ ಪರಮಾತ್ಮನನ್ನು ಹೊಂದುವ ಪ್ರಕಾರವನ್ನು ಸೂಚಿಸುವುದ ಕ್ಕಾಗಿ ಈ 'ಹದಿನೆಂಟು' ಎಂಬ ಸಂಖ್ಯೆ ಎಲ್ಲ ಕಡೆ ಉಪಪನ್ನವಾಗಿರಬಹುದೆಂದೂ ಊಹಿಸಬಹುದು.

ಹೀಗೆ ಅಷ್ಟಾಕ್ಷರ ಮಂತ್ರ, ದ್ವಯಮಂತ್ರವ್ಯಂಜಕವಾಗಿ ಹದಿನೆಂಟು ರಹಸ್ಯಗಳನ್ನು ಶ್ರೀ ಪಿಳ್ಳೈಲೋಕಾಚಾರ್ಯರು ಅನುಗ್ರಹಿಸಿದಂತೆ, ಸ್ವಾಮಿ ವೇದಾಂತದೇಶಿಕರು ಚರಮ ಶ್ಲೋಕ ಅಕ್ಷರಸಂಖ್ಯಾವ್ಯಂಜಕವಾಗಿ 32 ರಹಸ್ಯಗಳನ್ನು ಅನುಗ್ರಹಿಸಿರಬಹುದು. ಹೀಗೆ ವೇದಾಂತ ದೇಶಿಕರಿಗೂ ಲೇಕಾಚಾರ್ಯರು ಮಾರ್ಗದರ್ಶಕರಾಗಿದ್ದಾರೆನ್ನಬಹುದು.

ಈ ಪ್ರಕಾರವಾಗಿ ಸ್ವಾಮಿ ಪಿಳ್ಳೈಲೋಕಾಚಾರ್ಯರು ಅನುಗ್ರಹಿಸಿದ ರಹಸ್ಯಗ್ರಂಥಗಳು ಮೂರು ವಿಧಗಳಾಗಿವೆ.

ರಹಸ್ಯತ್ರಯಗಳಾದ ತಿರುಮಂತ್ರ, ದ್ವಯಂ ಚರಮಶ್ಲೋಕಗಳ ವಿವರಣಗಳಾಗಿಯೂ,

ತತ್ವತ್ರಯಗಳಾದ ಚಿತ್, ಅಚಿತ್, ಈಶ್ವರ ತತ್ವಗಳ ವಿವರಣೆಗಳಾಗಿಯೂ,

ಪರಮಾರ್ಥ ವಿವರಣೆಗಳಾಗಿಯೂ ಇವುಗಳನ್ನು ಗುರುತಿಸಬಹುದು.

ಈ ರೀತಿ ಎಲ್ಲ ವಿಧಗಳಿಂದ ಹದಿನೆಂಟು ಎಂಬುದು ಉತ್ತಮೋತ್ತಮ ಸಂಖ್ಯೆಯಾಗಿದೆ. ವ್ಯಾಸ, ಜೈಮಿನಿ, ಪಾಣಿನಿ, ಮುಂತಾದ ಸೂತ್ರಕಾರರ ಗ್ರಂಥಗಳ ಅಧ್ಯಾಯ ಸಂಖ್ಯೆಗಳು ಈ 8 ಮತ್ತು 10 ಎಂಬುದಕ್ಕೆ ಸಂಬಂಧಿಸಿದವುಗಳಾಗಿ ಇರುವಂತೆ, ಶ್ರೀ ವಾತ್ತಿಳ್ಳೈಲೋಕಾಚಾರ್ಯರ ಹದಿನೆಂಟು ರಹಸ್ಯಗ್ರಂಥಗಳೂ ಸೂತ್ರ ರೂಪದಲ್ಲಿ ಅನುಗ್ರಹಿಸಲ್ಪಟ್ಟಿವೆ.

ಅಷ್ಟಾದಶರಹಸ್ಯಗಳ ಹೆಸರುಗಳನ್ನೂ ಅವುಗಳ ಅವತಾರ ಕ್ರಮವನ್ನೂ ನಮ್ಮ ಪೂರ್ವರುಗಳು ಒಂದು ಶ್ಲೋಕದಲ್ಲಿ ಸಂಗ್ರಹಿಸಿದ್ದಾರೆ. ಆ ಶ್ಲೋಕವು

ಮುಮುಕ್ಷ್ವಾದಿ ತಸ್ಯಾದಿ ತತ್ವಾದಿ ಸಾದೀನ್
ಚತುಸ್ತ್ರಿದ್ವಿತ್ವ ಸಂಖ್ಯಾನ್ ಕ್ರಮೇಣ ।
ಪ್ರಾದೀ ನವಾದೀ ತಥಾಶ್ಯಾದಿ ಮಾದೀ
ಜಗುಃ ಕಾರ್ಷ್ಣಪಾದಿ ಪ್ರಣೀತಾನ್ ಪ್ರಬಂಧಾನ್ ॥ ಎಂಬುದಾಗಿದೆ.

ಇದನ್ನು ಹೀಗೆ ವಿವರಿಸಬಹುದು - 1) ಮುಮುಕ್ಷುಪ್ಪಡಿ, 2) ಪರನ್ದಪಡಿ, 3)ಶ್ರಿಯಃ ಪತಿಪ್ಪಡಿ, 4) ಯಾದೃಚ್ಛಿಕಪಡಿ ಎಂದು ಮುಮುಕ್ಷ್ವಾದಿಗಳು ನಾಲ್ಕು, 5)ತನಿದ್ವಯಮ್, 6) ತನಿಚರಮಮ್, 7) ತನಿಪ್ರಣಮಮ್ ಎಂದು ತನ್ಯಾದಿಗಳು ಮೂರು, 8) ತತ್ವತ್ರಯಂ, 9) ತತ್ವಶೇಖರಮ್ ಎಂದು ತತ್ವಾದಿಗಳು ಎರಡು, 10) ಸಾರಸಂಗ್ರಹಮ್, 11) ಸಂಸಾರಸಾಮ್ರಾಜ್ಯಂ ಎಂದು ಸಾದಿಗಳು ಎರಡು, 12) ಪ್ರಮೇಯ ಶೇಖರಮ್, 13)ಪ್ರಪನ್ನ ಪರಿತ್ರಾಣಂ ಎಂದು ಪ್ರಾದಿಗಳು ಎರಡು, 14) ನವರತ್ನ ಮಾಲೈ, 15)ನವವಿಧಸಂಬಂಧಮ್ ಎಂದು ನವಾದಿಗಳು ಎರಡು, 16) ಶ್ರೀವಚನಭೂಷಣಂ ಎಂದು ಶ್ಯಾದಿ ಒಂದು, 17) ಅರ್ಥಪಂಚಕಂ, 18) ಅರ್ಚಿರಾದಿ ಎಂದು ಅಕಾರಾದಿಗಳು ಎರಡು.

ಹೀಗೆ ಒಟ್ಟು ಹದಿನೆಂಟು ರಹಸ್ಯಗಳು ಎನ್ನಲಾಗಿದೆ. ಆದರೆ ಇದು ಅವತಾರ ಕ್ರಮದಲ್ಲಿಲ್ಲ. ಇವುಗಳ ಅವತಾರಕ್ರಮವು ಕೆಳಕಂಡಂತೆ ಹಿಂದೆ ಮುದ್ರಿತವಾದ ಗ್ರಂಥಗಳಲ್ಲಿವೆ.

1) ಮುಮುಕ್ಷುಪ್ಪಡಿ, 2) ತತ್ವತ್ರಯಂ, 3) ಅರ್ಥಪಂಚಕಂ, 4)ಶ್ರೀವಚನಭೂಷಣಂ, 5) ಅರ್ಚಿರಾದಿ, 6) ಪ್ರಮೇಯಶೇಖರಂ, 7)ಪ್ರಪನ್ನಪರಿತ್ರಾಣಂ, 8) ಸಾರಸಂಗ್ರಹಂ, 9) ಸಂಸಾರಸಾಮ್ರಾಜ್ಯಂ, 10) ನವವಿಧಸಂಬಂಧಂ, 11) ನವರತ್ನ ಮಾಲೈ, 12) ಯಾದೃಚ್ಛಿಕಪ್ಪಡಿ, 13) ಪರನ್ದಪಡಿ, 14) ಶ್ರಿಯಃ ಪತಿಪ್ಪಡಿ, 15)ತತ್ವಶೇಖರಮ್, 16) ತನಿದ್ವಯಮ್, 17) ತನಿಚರಮಮ್, 18) ತನಿಪ್ರಣವಮ್

ಈ ಕ್ರಮದಲ್ಲಿ ಹಲವು ಗ್ರಂಥಗಳಲ್ಲಿ ಮುದ್ರಿಸಲ್ಪಟ್ಟಿರುವುದನ್ನು ಕಾಣಬಹುದು. ಈ ಕ್ರಮವನ್ನು ಅನುಸರಿಸಲು ಅವರಿಗೆ ದೊರೆತ ಪ್ರಮಾಣಗಳು ಯಾವುದೆಂಬುದು ತಿಳಿಯದಾಗಿದೆ. ಆದರೆ ಶ್ರೀಮತ್ಪಿಳ್ಳೈಲೋಕಾಚಾರ್ಯರ ಗ್ರಂಥಗಳಲ್ಲೇ ಕೆಲವು ರಹಸ್ಯಗಳ ರಚನಾಕ್ರಮಗಳ ಬಗ್ಗೆ ಮಾಹಿತಿಗಳು ದೊರೆಯುತ್ತವೆ.

ಶ್ರೀವಚನಭೂಷಣದಲ್ಲಿ 'ಅವನುಡೈಯ ರಕ್ಷಕತ್ವಮ್ ಪ್ರಪನ್ನ ಪರಿತ್ರಾಣತ್ತಿಲೇ ಶೊನ್ನೋಮ್', ಅರ್ತಿಯುಂ, ಅಭಿನಿವೇಶಮುಂ ಇರುಕ್ಕುಂಪಡಿ ಅರ್ಚಿರಾದಿಗತಿಯಿಲೇ ಶೊನ್ನೋಮ್' ಎಂದು ಈ ಎರಡು ಗ್ರಂಥಗಳು ಉದಾಹರಿಸಲ್ಪಟ್ಟಿವೆ.

ಮುಮುಕ್ಷುಪ್ಪಡಿಯಲ್ಲಿ - 'ಫಲಮಿರುಕ್ಕುಂಪಡಿ ಪ್ರಮೇಯಶೇಖರತ್ತಿಲುಂ, ಅರ್ಚಿರಾದಿಗತಿಯಿಲುಂ, ಶೊನ್ನೋಮ್; ಈಶ್ವರನೈ ಒಳಿದ್ದವರ್‌ಗಳ್

ರಕ್ಷಕರಲ್ಲರೆನ್ನು ಮಿಡಮ್ ಪ್ರಪನ್ನಪರಿತ್ರಾಣತ್ತಿಲೇ ಶೊನ್ನೋಮ್; ದೇಹತ್ತಿಲ್ ವ್ಯಾವೃತ್ತಿ ತತ್ವಶೇಖರತ್ತಿಲೇ ಶೊನ್ನೋಮ್; ಇವೈ ಇರಂಡುಂ ಪ್ರಪನ್ನ ಪರಿತ್ರಾಣತ್ತಿಲೇ ಶೊನ್ನೋಮ್; ಎಂದು ಪ್ರಮೇಯಶೇಖರಮ್, ಅರ್ಚಿರಾದಿಗತಿ, ಪ್ರಪನ್ನ ಪರಿತ್ರಾಣಂ, ತತ್ವಶೇಖರಮ್ ಇವುಗಳು ಉದಾಹರಿಸಲ್ಪಟ್ಟಿವೆ.

ಪರನ್ದ ಪಡಿಯಲ್ಲಿ - 'ಫಲತ್ತುಕ್ಕು ವ್ಯಭಿಚಾರಮಿಲ್ಲೈ' ಎನ್ನುಮಿಡಮ್ ದ್ವಯತ್ತಿಲೇ ಶೊನ್ನೋಮ್ ಎಂದು ತನಿದ್ವಯವು ಉದಾಹರಿಸಲ್ಪಟ್ಟಿದೆ.

ಆದ್ದರಿಂದ ಶ್ರೀವಚನಭೂಷಣಕ್ಕೆ ಮೊದಲೇ 'ಪ್ರಪನ್ನ ಪರಿತ್ರಾಣವೂ', 'ಅರ್ಚಿರಾದಿ' ಎಂಬವುಗಳೂ, ಮುಮುಕ್ಷುಪ್ಪಡಿಗೆ ಮೊದಲೇ 'ಪ್ರಮೇಯಶೇಖರವೂ ', 'ತತ್ವಶೇಖರವೂ', 'ಅರ್ಚಿರಾದಿ', 'ಪ್ರಪನ್ನ ಪರಿತ್ರಾಣ', 'ಪರನ್ದಪಡಿ' ಇವುಗಳೂ ರಚಿಸಲ್ಪಟ್ಟಿದ್ದವೆಂದು ಇವರ ಗ್ರಂಥಗಳಿಂದಲೇ ತಿಳಿದು ಬರುವ ವಿಷಯವಾಗಿದೆ.

ಇವರ ಮೂರು ಗ್ರಂಥಗಳಿಗೆ ವ್ಯಾಖ್ಯಾನಗಳನ್ನು ರಚಿಸಿರುವ ಸ್ವಾಮಿ ಮಣವಾಳ ಮಾಮುನಿಗಳು ರಹಸ್ಯಗ್ರಂಥಗಳ ಕ್ರಮವನ್ನು ಮುಮುಕ್ಷುಪ್ಪಡಿ ವ್ಯಾಖ್ಯಾನ ಅವತಾರಿಕೆಯಲ್ಲಿ ಹೀಗೆ ತಿಳಿಸಿದ್ದಾರೆ.

''ಮುನ್ನೇ ರಹಸ್ಯತ್ರಯ ವಿಷಯಮಾಗ ಮೂನ್ರು ಪ್ರಬಂಧಮಿಟ್ಟರುಳಿ ಇರುಕ್ಕಚ್ಚೆಯ್ದೇಯುಮ್ ಅದಿಲ್ -

ಯಾದೃಚ್ಛಿಕಪಡಿ ಅತಿಸಂಗ್ರಹ ಮಾಗೈಯಾಲುಮ್

ಪರನ್ದಪಡಿ ಅತಿವಿಸ್ತೃತ ಮಾಗೈಯಾಲುಮ್

ಶ್ರಿಯಃಪತಿಪಡಿ ಉಭಯದೋಷಮಿನ್ರಿಕ್ಕೇಯಿರುನ್ದದೇಯಾಗಿಲುಮ್ ಸಂಸ್ಕೃತ ವಾಕ್ಯಂ ಬಹುಳ ಮಾಗೈಯಾಲುಂ ಪೆಣ್ಣುಕ್ಕುಂ ಪೇದೈಕ್ಕುಂ ಅಧಿಕರಿಕ್ಕಪ್ಪೋಗಾಮೈಯಾಲುಂ ತ್ರಿವಿಧದೋಷಂಗಳ್ ಇಲ್ಲಾದ ಪಡಿ ಇನ್ನಮುಮ್ ಒರು ಪ್ರಬಂಧಮಿಡವೇಣುಮೆನ್ರು, ತಿರುವುಳ್ಳಂ ಪತ್ತಿ , ಎಲ್ಲಾರುಕ್ಕುಮ್ ಪಿನ್ಬಿರೇ ಮುಮುಕ್ಷುಪ್ಪಡಿಯಾಗಿರ ಇಪ್ಪ್ರಬಂಧಮಿಟ್ಟರುಳಿತ್ತು . ಆಗೈಯಿರೇ ಅಲ್ಲಾದ ಪ್ರಬಂಧಂಗಳ್ ಕಿಡಕ್ಕ ಇತ್ತೈ ಎಲ್ಲಾರುಮ್ ಅಧಿಕರಿತ್ತು ಪೋಪ್ಪರುಗಿರದು. ಇನ್ನಮುಂ ಪೂರ್ವಪ್ರಬಂಧಂಗಳಿಲ್ ಅನುಕ್ತಮಾನ ಅರ್ಥವಿಶೇಷಂಗಳುಂ ಇಪ್ಪ್ರಬಂಧತ್ತಿಲೇ ಉಂಡಾಗೈಯಾಲುಮ್ ಇದುವೇ ಎಲ್ಲಾರುಕ್ಕುಂ ಆದರಣೀಯ ಮಾಯಿರುಕ್ಕುಮ್'' ಎಂದಿದ್ದಾರೆ.

ಹಾಗೂ ದ್ವಯಪ್ರಕರಣದಲ್ಲಿ 'ಪ್ರಪದ್ಯೇ' ಎಂಬ ಪದವನ್ನು ವಿವರಿಸುವಲ್ಲಿ ''ಅದಾವದು ಒರು ಬುದ್ಧಿವಿಶೇಷಮ್ ಇನ್ದ ಬುದ್ಧಿ ವಿಶೇಷಂ ಪರನ್ದಪಡಿಯಿಲೇ ವಿಸ್ತರೇಣ ಅರುಳಿಚ್ಚೆಯ್ದಾರ್'' ಎಂದು ತಿಳಿಸಿದ್ದಾರೆ.

ಹಾಗೂ ಚರಮಶ್ಲೋಕ ಪ್ರಕರಣದಲ್ಲಿ 'ವ್ರಜ' ಶಬ್ದವನ್ನು ವಿವರಿಸುವಲ್ಲಿ ''ಇನ್ದ ಬುದ್ಧಿಯಾಗಿರದು..........ಅಧ್ಯವಸಾಯಾತ್ಮಕ ಜ್ಞಾನವಿಶೇಷಮ್' ಎನ್ರು

ಪರನ್ದಪಡಿಯಿಲೇ ಇವರ್ ಅರುಳಿಚ್ಚೆಯ್‌ದದು ಇವ್ವಿಡತ್ತಿಲೇ ಅನುಸಂಧೇಯಮ್'' ಎಂದೂ ಸ್ವಾಮಿ ಮಣವಾಳಮಾಮುನಿಗಳು ಅನುಗ್ರಹಿಸಿದ್ದಾರೆ.

ಆದ್ದರಿಂದ ರಹಸ್ಯತ್ರಯಗಳನ್ನು ವಿವರಿಸುವ ರಹಸ್ಯ ಗ್ರಂಥಗಳಲ್ಲಿ ತನಿದ್ವಯಮ್, ಯಾದೃಚ್ಛಿಕಪಡಿ, ಪರನ್ದಪಡಿ, ಶ್ರಿಯಃಪತಿಪಡಿ ಎಂಬ ಗ್ರಂಥಗಳನ್ನು ರಚಿಸಿದ ನಂತರವೇ ಮುಮುಕ್ಷುಪಡಿಯನ್ನು ರಚಿಸಲಾಗಿದೆ ಯೆಂದೂ, ಈ ಮುಮುಕ್ಷುಪ್ಪಡಿಗೆ ಮೊದಲೇ ಪ್ರಮೇಯಶೇಖರಮ್, ಅರ್ಚ್ಚಿರಾದಿ, ಪ್ರಪನ್ನ ಪರಿತ್ರಾಣಂ, ತತ್ವಶೇಖರಂ ಮೊದಲಾದ ಇತರ ರಹಸ್ಯ ಗ್ರಂಥಗಳು ಅವತರಿಸಿವೆ ಎಂಬುದಾಗಿಯೂ ಹೇಳಬಹುದು.

ಆದರೆ ಇತರ ರಹಸ್ಯಗಳ ಪೂರ್ವಾಪರ್ಯಗಳ ವಿವರಗಳು ತಿಳಿದಿಲ್ಲ. ಈ ಅಷ್ಟಾದಶ ರಹಸ್ಯಗಳನ್ನು ಎರಡು ಗುಂಪುಗಳಾಗಿ ಇವೆ. ಶ್ರೀ ವೈಷ್ಣವ ಸಂಪ್ರದಾಯದಲ್ಲಿ ಅಸಾಧಾರಣಗಳಾಗಿ ಪರಮ ಉಪಾದೇಯಗಳಾಗಿರುವ ತಿರುಮಂತ್ರ, ದ್ವಯ, ಚರಮಶ್ಲೋಕಗಳೆಂಬ ರಹಸ್ಯ್ರಯಗಳ ವಿವರಗಳಾಗಿ ಎಂಟು ರಹಸ್ಯ ಗ್ರಂಥಗಳೂ; ಸ್ವತಂತ್ರವಾಗಿ ಪ್ರತಿತಂತ್ರಸಿದ್ಧವಾದ ಪ್ರಮೇಯಗಳನ್ನು ನಿರೂಪಿಸುವ ಗ್ರಂಥಗಳಾಗಿ ಉಳಿದ ಹತ್ತು ಗ್ರಂಥಗಳೂ ಇವೆ ಎಂಬುದು ಸರ್ವಸಮ್ಮತ ಅಭಿಪ್ರಾಯವಾಗಿದೆ.

ಅಷ್ಟಾದಶ ರಹಸ್ಯಗಳಲ್ಲಿ ನಿರೂಪಿಸಲ್ಪಟ್ಟ ವಿಷಯಗಳನ್ನು ಈ ರೀತಿ ಸಂಗ್ರಹಿಸಬಹುದು. 1) ಯಾದೃಚ್ಛಿಕಪ್ಪಡಿ, 2) ಮುಮುಕ್ಷುಪ್ಪಡಿ, 3) ಶ್ರಿಯಃಪತಿಪ್ಪಡಿ, 4)ಪರನ್ದಪಡಿ, 5) ತನಿದ್ವಯಮ್, 6) ತನಿಚರಮಮ್, 7) ತನಿಪ್ರಣವಮ್ ಎಂಬ ಈ ಏಳೂ ಗ್ರಂಥಗಳಲ್ಲಿ ತಿರುಮಂತ್ರ, ದ್ವಯ, ಚರಮಶ್ಲೋಕಗಳೆಂಬ ರಹಸ್ಯತ್ರಯಗಳನ್ನು ವಿಪುಲ, ವಿಪುಲತರ, ವಿಪುಲತಮವಾಗಿ ವಿವರಿಸಲಾಗಿದೆ.

**8) ಸಾರಸಂಗ್ರಹ** - ಈ ಗ್ರಂಥದಲ್ಲ ಸ್ವಾಮಿ ನಮ್ಮಾಳ್ವಾರ್ ಅನುಗ್ರಹಿಸಿರುವ ತಿರುವಾಯ್ಮೊಳಿಗೂ ರಹಸ್ಯತ್ರಯಗಳಲ್ಲಿ ಒಂದಾದ ದ್ವಯಕ್ಕೂ ಇರುವ ಐಕಕಂಠ್ಯವನ್ನು ನಿರೂಪಿಸಲಾಗಿದೆ.

**9) ತತ್ವತ್ರಯಮ್** - ಇದರಲ್ಲಿ ಚಿತ್ ಪ್ರಕರಣ, ಅಚಿತ್ ಪ್ರಕರಣ, ಈಶ್ವರ ಪ್ರಕರಣ ಎಂಬುದಾಗಿ ಮೂರು ಪ್ರಕರಣಗಳಿವೆ. ಚಿತ್, ಅಚಿತ್, ಈಶ್ವರ ಎಂಬ ತತ್ವತ್ರಯಗಳ ಲಕ್ಷಣ, ಸ್ವರೂಪ, ಪ್ರಮಾಣ, ವಿಭಾಗ, ವ್ಯಾಪಾರ ಪ್ರಯೋಜನಗಳನ್ನು ಇತರ ಮತ ನಿರಾಕರಣಪೂರ್ವಕವಾಗಿ ನಿರೂಪಿಸಲಾಗಿದೆ.

**10) ತತ್ವಶೇಖರಮ್** - ಇದರಲ್ಲಿ ಪರಸ್ವರೂಪ, ಜೀವಸ್ವರೂಪ, ಪುರುಷಾರ್ಥ ಸ್ವರೂಪ, ವಿರೋಧಿ ಸ್ವರೂಪ, ಉಪಾಯಸ್ವರೂಪಗಳೆಂಬ ಐದು ಪ್ರಕರಣಗಳಿವೆ.

ಮೊದಲ ಪ್ರಕರಣದಲ್ಲಿ - ಬ್ರಹ್ಮರುದ್ರಾದಿಗಳನ್ನೊಳಗೊಂಡು ಇತರ ದೇವತೆಗಳಿಗೆ ಪರತ್ವವು ಶಂಕಿಸಲ್ಪಟ್ಟು, ಅದನ್ನು ನಿವರ್ತಿಸಿ ಶ್ರೀಮನ್ನಾರಾಯಣನಲ್ಲೇ ಪರತ್ವವು ನಿರೂಪಿಸಲ್ಪಟ್ಟಿದೆ.

ಎರಡನೆಯ ಪ್ರಕರಣದಲ್ಲಿ - ಜೀವಾತ್ಮಗಳು ದೇಹೇಂದ್ರಿಯ ಮನಃ ಪ್ರಾಣಾದಿಗಳಿಗಿಂತ ವಿಲಕ್ಷಣವಾಗಿ ಸ್ವಯಂಪ್ರಕಾಶಕವಾಗಿ, ಆನಂದರೂಪವಾಗಿ ಜ್ಞಾನಾನಂದಗಳಿಗೆ

ಆಶ್ರಯಭೂತವಾಗಿ, ನಿತ್ಯವಾಗಿ ಅಣುವಾಗಿ, ಪರಿಶುದ್ಧವಾಗಿ, ಭಗವಚ್ಛೇಷಭೂತರಾಗಿರುವುದನ್ನು ಪ್ರತಿಪಾದಿಸಲಾಗಿದೆ.

ಮೂರನೆಯ ಪ್ರಕರಣದಲ್ಲಿ - ಇತರ ಮತನಿರಸನಪೂರ್ವಕವಾಗಿ ಸವಿ ಭೂತಿಕ ಸಮಸ್ತಕಲ್ಯಾಣ ಗುಣಪರಿಪೂರ್ಣ ಪರಮಾತ್ಮನ ಚರಣನಳಿನಗಳಲ್ಲಿ ಭಗವದನು ಭವ ಜನಿತ ಪ್ರೀತಿಕಾರಿತ ಕೈಂಕರ್ಯವೇ ಪುರುಷಾರ್ಥ ಎಂಬುದನ್ನು ನಿರೂಪಿಸಲಾಗಿದೆ.

ನಾಲ್ಕನೆಯ ಪ್ರಕರಣದಲ್ಲಿ - ಈ ಪುರುಷಾರ್ಥಕ್ಕೆ ವಿರೋಧಿಯಾದದ್ದು ಜನನ ಮರಣಾದಿಗಳಲ್ಲಿ ನಾನಾವಿಧ ದುಃಖಗಳನ್ನು ಚಕ್ರದಂತೆ ಸುತ್ತುತ್ತಾ ಅನುಭವಿಸುವಂತೆ ಮಾಡುವ ಕರ್ಮ ಸಂಬಂಧ ಎಂಬುದನ್ನು ನಿರ್ಣಯಿಸಲಾಗಿದೆ.

ಐದನೆಯ ಪ್ರಕರಣದಲ್ಲಿ - ಈ ವಿರೋಧಿ ನಿವೃತ್ತಿಗೆ ಉಪಾಯವು ಸರ್ವಾಧಿ ಕಾರವಾದ ಶರಣಾಗತಿ ಎಂದರೆ ಪರಮಾತ್ಮನ ಪ್ರಪದನ ಎಂಬುದನ್ನು ಇತರ ಮತನಿರಾಕರಣ ಪೂರ್ವಕವಾಗಿ ಸ್ಥಾಪಿಸಲಾಗಿದೆ.

**11) ಅರ್ಥಪಂಚಕಮ್** - ಈ ರಹಸ್ಯಗ್ರಂಥವು ಐದು ಪ್ರಕರಣಗಳನ್ನೊಳಗೊಂಡಿದೆ.

ಮೊದಲನೆಯದಾದ ಅ) ಜೀವಸ್ವರೂಪ ಪ್ರಕರಣದಲ್ಲಿ ಅರ್ಥಪಂಚಕದ ವಿಶೇಷವನ್ನೂ ಅದರಲ್ಲಿ ಒಂದೊಂದು ಅರ್ಥದ ಪಂಚವಿಧತ್ವವನ್ನೂ ; ನಿತ್ಯ, ಮುಕ್ತ, ಬದ್ಧ , ಕೇವಲ, ಮುಮುಕ್ಷುಗಳೆಂಬ ಐದು ವರ್ಗಗಳಲ್ಲಿರುವ ಚೇತನರ ಸ್ವರೂಪಾದಿಗಳೂ ವಿವರಿಸಲ್ಪಟ್ಟಿವೆ.

ಆ) ಈಶ್ವರ ಸ್ವರೂಪ ನಿರೂಪಣ ಪ್ರಕರಣ - ಇದರಲ್ಲಿ ಪರ, ವ್ಯೂಹ, ವಿಭವ, ಅಂತರ್ಯಾಮಿ, ಅರ್ಚಾ ಎಂಬ ಈಶ್ವರನ ಐದು ಪ್ರಕಾರಗಳು ವಿವರಿಸಲ್ಪಟ್ಟಿವೆ.

ಇ) ಪುರುಷಾರ್ಥ ಸ್ವರೂಪ ನಿರೂಪಣ ಪ್ರಕರಣ - ಇದರಲ್ಲಿ ಧರ್ಮ, ಅರ್ಥ, ಕಾಮ, ಆತ್ಮಾನುಭವ, ಭಗವದನುಭವರೂಪಗಳಾದ ಐದು ಪುರುಷಾರ್ಥಗಳ ಸ್ವರೂಪಾದಿಗಳು ನಿರೂಪಿಸಲ್ಪಟ್ಟಿವೆ.

ಈ) ಉಪಾಯ ಸ್ವರೂಪ ಪ್ರಕರಣ - ಇದರಲ್ಲಿ ಕರ್ಮ, ಜ್ಞಾನ, ಭಕ್ತಿ , ಪ್ರಪತ್ತಿ , ಆಚಾರ್ಯಾಭಿಮಾನ ರೂಪಗಳಾದ ಐದು ಉಪಾಯಗಳ ಸ್ವರೂಪಾದಿಗಳು ಪ್ರತಿಪಾದಿಸಲ್ಪಟ್ಟಿವೆ.

ಉ) ವಿರೋಧಿಸ್ವರೂಪ ನಿರೂಪಣ ಪ್ರಕರಣ - ಇಲ್ಲಿ ಸ್ವರೂಪ, ಪರತ್ವ , ಪುರುಷಾರ್ಥ , ಉಪಾಯ, ಉಪೇಯಗಳಿಗೇರ್ಪಡುವ ವಿರೋಧಿಗಳ ಸ್ವರೂಪವನ್ನು ಪ್ರತಿಪಾದಿಸಲಾಗಿದೆ.

ಹೀಗೆ ಐದು ಅರ್ಥಗಳ ಐದೈದು ವಿಧಗಳು ವಿಸ್ತರವಾಗಿ ಪ್ರತಿ ಪಾದಿಸಲ್ಪಟ್ಟಿರುವುದರಿಂದ ಅರ್ಥಪಂಚಕವೆಂಬ ಅನ್ವರ್ಥನಾಮ ಹೊಂದಿದೆ.

**12) ಅರ್ಚಿರಾದಿ** - ಇದರಲ್ಲಿ ನಾಲ್ಕು ಪ್ರಕರಣಗಳಿವೆ.

ಮೊದಲನೆ ಪ್ರಕರಣದಲ್ಲಿ - ನಿತ್ಯವಿಭೂತಿಯಲ್ಲಿರುವವರಿಗೂ, ಲೀಲಾವಿಭೂತಿ ಯಲ್ಲಿರುವವರಿಗೂ ಇರುವ ಸ್ವರೂಪ ವಿಶೇಷವನ್ನೂ ಮುಮುಕ್ಷುತ್ವ ಏರ್ಪಡುವ ಕ್ರಮವನ್ನೂ,

ಮುಮುಕ್ಷುಗಳಿಗೆ ಭಗವಂತನು ಮಾಡುವ ಉಪಕಾರವನ್ನೂ, ಮುಕ್ತಾತ್ಮನ ಅನುಭವಪ್ರಕ್ಕಾರಗಳನ್ನೂ ಆತಿವಾಹಿಕರು ನಡೆಸುವ ಸಂಭಾವನೆಗಳನ್ನೂ ವಿವರಿಸಲಾಗಿದೆ.

ಎರಡನೆಯ ಪ್ರಕರಣದಲ್ಲಿ - ಅರ್ಚಿರಾದಿಗಮನ ಕ್ರಮವನ್ನೂ, ಶ್ರೀ ವೈಕುಂಠದಿವ್ಯ ಸಂಸ್ಥಾನ ಪ್ರವೇಶವನ್ನೂ, ದಿವ್ಯಸ್ಥಾನಮಂಟಪ ಪ್ರಾಪ್ತಿಯನ್ನೂ, ಅಸ್ತ್ರಶಸ್ತ್ರಾಖ್ಯರಾದ ದಿವ್ಯಪುರುಷರಿಂದ ಸೇವ್ಯಮಾನತ್ವವನ್ನೂ ವರ್ಣಿಸಲಾಗಿದೆ.

ಮೂರನೇಯ ಪ್ರಕರಣದಲ್ಲಿ - ದಿವ್ಯ ಸಿಂಹಾಸನದಲ್ಲಿ ಪ್ರಧಾನ ಮಹಿಷಿಗಳಾದ ಶ್ರೀ ಭೂ, ನೀಳಾಸಮೇತನಾಗಿ ಭಗವಂತನು ಬಿಜಯಮಾಡಿಸಿರುವ ಪ್ರಕಾರವನ್ನೂ, ಆ ಪರಮಾತ್ಮನ ಆಪಾದಚುಡಸೌಂದರ್ಯಸೌಭಾಗ್ಯಾದಿ ವರ್ಣನವೂ ನಿರೂಪಿಸಲ್ಪಟ್ಟಿದೆ.

ನಾಲ್ಕನೆಯ ಪ್ರಕರಣದಲ್ಲಿ - ಶ್ರೀ ವೈಕುಂಠನಾಥನ ಅಭೂತ ಪೂರ್ವ ದರ್ಶನದಿಂದ ಏರ್ಪಡುವ ಬ್ರಹ್ಮಾನಂದ ಕ್ರಮವನ್ನೂ, ನಂತರ ಭಗವದುಪಲಾಲನಾಕ್ರಮ ವನ್ನೂ, ನಿತ್ಯಕೈಂಕರ್ಯಾನುಷ್ಠಾನ ಕ್ರಮವನ್ನೂ, ಮಂಗಳಾಶಾಸನ ಕ್ರಮವನ್ನೂ, ಅಮೃತಸಾಗರಾಂತರ್ನಿಮಗ್ನ ಸರ್ವಾವಯವನಾಗಿ ಮುಕ್ತನು ಯಾವದಾತ್ಮಭಾವಿ ಇರುವ ಕ್ರಮವನ್ನೂ ವಿಶದತಮವಾಗಿ ಪ್ರತಿಪಾದಿಸಲಾಗಿದೆ.

**13) ಪ್ರಮೇಯ ಶೇಖರಮ್** - ಚೇತನನಿಗೆ ಅಜ್ಞಾತಸುಕೃತಾದಿಗಳು ಏರ್ಪಡುವ ಕ್ರಮವನ್ನೂ, ಹೃದಯಗುಹಾನಿರ್ಗಮನ ಕ್ರಮವನ್ನೂ, ದಿವ್ಯ ದೇಹ್ಯಾಪ್ರಾಪ್ತಿ ಪ್ರಕಾರವನ್ನೂ, ದಿವ್ಯಪಾರಿಷತ್ಪ್ರಾಪ್ತಿ ಕ್ರಮವನ್ನೂ, ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತ ಕೈಂಕರ್ಯಪ್ರಾಪ್ತಿ ಕ್ರಮವನ್ನೂ ಈ ಗ್ರಂಥದಲ್ಲಿ ನಿರೂಪಿಸ ಲಾಗಿದೆ.

**14) ಸಂಸಾರ ಸಾಮ್ರಾಜ್ಯಮ್** - ಸಂಸಾರ ಸಾಮ್ರಾಜ್ಯ ಅನುಭವ ಪ್ರಕಾರವನ್ನೂ, ಪರಮಾತ್ಮನ ನಿರ್ಹೇತುಕ ಕೃಪೆಯಿಂದ ಭಗವದ್ವಿಷಯದಲ್ಲಿ ಅದ್ವೇಷ ಆಭಿಮುಖ್ಯಾದಿಗಳು ಏರ್ಪಡುವುದನ್ನೂ, ಚೇತನದ ಪಶ್ಚಾತ್ತಾಪವನ್ನೂ, ಆಚಾರ್ಯ ವಿಷಯದಲ್ಲಿನ ಕೃತಜ್ಞತಾಭಾವವನ್ನೂ, ಭಗವದ್ವಿಷಯದಲ್ಲಿ ಪ್ರೇಮಾ ವಿರ್ಭಾವವನ್ನೂ, ಶ್ರೀ ಮಹಾಲಕ್ಷ್ಮೀ ಪುರುಷಾಕರ ದ್ವಾರಾ ಭಗವಂತನು ಪ್ರಾಪ್ತಿ ಪರ್ಯಂತವಾಗಿ ಅನುಗ್ರಹಿಸುವುದನ್ನೂ ಇಲ್ಲಿ ವಿಶದವಾಗಿ ಪ್ರತಿಪಾದಿಸಲಾಗಿದೆ.

**15) ನವರತ್ನಮಾಲೈ** - ಈ ರಹಸ್ಯ ಗ್ರಂಥದಲ್ಲಿ ಶರಣಾಗತನು 1) ತನ್ನನ್ನೂ, 2) ತಮಗೆ ವಿರೋಧಿಯಾದ ದೇಹವನ್ನೂ, 3) ದೇಹವನ್ನಾಧರಿಸಿ ಬರುವ ಬಂಧುಗಳನ್ನೂ 4) ಸಂಸಾರಿಗಳನ್ನೂ, 5) ದೇವತಾಂತರಗಳನ್ನೂ, 6) ಶ್ರೀ ವೈಷ್ಣವರುಗಳನ್ನೂ, 7)ಆಚಾರ್ಯರನ್ನೂ, 8) ಶ್ರೀ ಮಹಾಲಕ್ಷ್ಮಿಯನ್ನೂ, 9) ಪರಮಾತ್ಮನನ್ನೂ ಭಾವಿಸಬೇಕಾದ ಕ್ರಮವನ್ನು ಸುಂದರವಾಗಿ ನಿರ್ದಿಷ್ಟವಾಗಿ ತಿಳಿಸಲಾಗಿದೆ.

**16) ನವವಿಧಸಂಬಂಧಮ್** - 1) ವಿಶೇಷಣ ವಿಶೇಷ್ಯ ಸಂಬಂಧ, 2)ರಕ್ಷ್ಯರಕ್ಷಕಸಂಬಂಧ, 3) ಶೇಷಶೇಷಿ ಸಂಬಂಧ, 4) ಭರ್ತೃ ಭಾರ್ಯಾಸಂಬಂಧ, 5)ಜ್ಞಾತೃಜ್ಞೇಯ ಸಂಬಂಧ, 6) ಸ್ವಸ್ವಾಮಿಭಾವ ಸಂಬಂಧ, 7) ಶರೀರ ಶರೀರಿ ಸಂಬಂಧ,

8)ಧಾರ್ಯಧಾರಕ ಸಂಬಂಧ, 9) ಭೋಕ್ತೃಭೋಗ್ಯ ಸಂಬಂಧ - ಗಳೆಂಬ ಆತ್ಮ ಮತ್ತು ಪರಮಾತ್ಮರ ನಡುವಿನ ಒಂಭತ್ತು ವಿಧವಾದ ಸಂಬಂಧಗಳು ಈ ಗ್ರಂಥದಲ್ಲಿ ಕ್ರಮವಾಗಿ ನಿರೂಪಿಸಲ್ಪಟ್ಟಿದೆ.

**17) ಪ್ರಪನ್ನ ಪರಿತ್ರಾಣಂ** - ಚೇತನರಿಗೆ ಮಾತಾಪಿತಾಭ್ರಾತಾಪುತ್ರ ಬ್ರಹ್ಮರುದ್ರಾದಿ ಮೊದಲಾದ ಇತರ ದೇವತೆಗಳು ಯಾರೂ ರಕ್ಷಕರಲ್ಲ ಎಂಬು ದನ್ನು ನಿದರ್ಶನ ಪೂರ್ವಕವಾಗಿ ಉಪಪಾದನೆ ಮಾಡಿ, ಆಕಿಂಚನ್ಯ ಅನನ್ಯಗತಿತ್ವನ್ನುಳ್ಳ ಆತ್ಮನನ್ನು ಭಗವಂತನು ರಕ್ಷಿಸುವ ಕ್ರಮವನ್ನು ಈ ಗ್ರಂಥದಲ್ಲಿ ಮರ್ಮಸ್ಪರ್ಶಿಯಾಗಿ ನಿರೂಪಿಸಲಾಗಿದೆ.

**18) ಶ್ರೀವಚನಭೂಷಣಮ್** - ಈ ಮಹದ್ ಗ್ರಂಥವು ಆರು ಪ್ರಕರಣಗಳನ್ನೊಳ ಗೊಂಡಿದೆ. ಕೆಲವರು ಒಂಭತ್ತು ಪ್ರಕರಣಗಳು ಎಂದೂ ಅಭಿಪ್ರಾಯಪಡುತ್ತಾರೆ.

ಮೊದಲನೆ ಪ್ರಕರಣದಲ್ಲಿ - ಈ ಗ್ರಂಥದ ಉಪೋದ್ಘಾತವನ್ನೂ, ಪುರುಷಕಾರ ವೈಭವವನ್ನೂ, ಉಪಾಯ ವೈಭವವನ್ನೂ

ಎರಡನೇ ಪ್ರಕರಣದಲ್ಲಿ - ಪ್ರಪತ್ತಿಯ ಉಪಾಯತ್ವವನ್ನೂ

ಮೂರನೇಯ ಪ್ರಕರಣದಲ್ಲಿ - ಅಧಿಕಾರಿನಿಷ್ಠಾ ಕ್ರಮವನ್ನೂ

ನಾಲ್ಕನೇಯ ಪ್ರಕರಣದಲ್ಲಿ - ಸಿದ್ಧೋಪಾಯ ನಿಷ್ಠನಾದ ಅಧಿಕಾರಿಯ ಸ್ವಾಚಾರ್ಯಾನು ವರ್ತನ ಕ್ರಮವನ್ನೂ

ಐದನೇಯ ಪ್ರಕರಣದಲ್ಲಿ - ಭಗವನ್ನಿರ್ಹೇತುಕಕೃಪಾಪ್ರಭಾವವನ್ನೂ

ಆರನೇಯ ಪ್ರಕರಣದಲ್ಲಿ - ಗುರೋರುಪಾಯತ್ವವೆಂಬ ಚರಮ ಪರ್ವ ನಿಷ್ಠಾಕ್ರಮವನ್ನೂ ಪ್ರತಿಪಾದಿಸಲಾಗಿದೆ.

ಹೀಗೆ ಅಷ್ಟಾದಶ ರಹಸ್ಯಗಳು ಉಜ್ಜೀವನಾರ್ಹನಾದ ಚೇತನನಿಗೆ ಅತ್ಯಂತ ಅಪೇಕ್ಷ್ಯವಾದ ಸಮಗ್ರ ವಿಷಯಗಳನ್ನೂ ವಿಶದತಮವಾಗಿ ಸಮರ್ಥವಾಗಿ ನಿರೂಪಿಸುತ್ತವೆ.

॥ ಸ್ವಾಮಿ ಪಿಳ್ಳೈಲೋಕಾಚಾರ್ಯರ್ ತಿರುವಡಿಗಳೇ ಶರಣಂ ॥
॥ ಜೀಯರ್ ತಿರುವಡಿಗಳೇ ಶರಣಂ ॥

## ಆಧಾರ

**ಶ್ರೀ ತಿ.ಕು.ವೆಂ.ನ. ಸುದರ್ಶನಾಚಾರ್ಯರ ಲೇಖನ**
**ಶ್ರೀ ವೆಂಕಟೇಶ್ವರ ಪ್ರಾಚ್ಯ ಪರಿಶೋಧನಾಲಯ**
**1956**

# ನಮ್ಮ ಪ್ರಕಟಣೆಗಳು

1) ತತ್ವತ್ರಯಂ (ವ್ಯಾಖ್ಯಾನದ ಕನ್ನಡ ಅನುಸಾರ) - ಶ್ರೀಮತಿ ರಮಾಶ್ರೀನಿವಾಸನ್
2) ಪ್ರಪನ್ನ ಪರಿತ್ರಾಣಂ (ಅನುವಾದ ಮತ್ತು ವ್ಯಾಖ್ಯಾನ) - ''
3) ನವವಿಧ ಸಂಬಂಧಂ - ''
4) ತಿಳಿಯಲೇಬಾಕಾದುದು - ''
5) ಕೈಶಿಕಪುರಾಣಮ್ (ಅನುವಾದ) - ''
6) ಥೇಂಕಿಣೀಪುರ ಮಹಾತ್ಮ್ಯಂ - ''
7) ಮುಮುಕ್ಷುಪ್ಪಡಿ (ವ್ಯಾಖ್ಯಾನದ ಕನ್ನಡ ಅನುವಾದ) - ''
8) ಅರ್ಥಪಂಚಕಮ್ (ಅನುವಾದ ಮತ್ತು ವ್ಯಾಖ್ಯಾನ) - ''
9) ಅನುಷ್ಠಾನ ದರ್ಶಿನೀ (ಮಂತ್ರಾರ್ಥ ವಿವರಣೆ) - ಶ್ರೀ ಉ॥ವೇ॥ಘಂಟಿ ತಿರುವೇಂಕಟಾಚಾರ್ಯ
10) ಭಗವದ್ಗುಣ ವೈಭವಮ್ - ಶ್ರೀಮತಿ ಲಲಿತಮ್ಮ ರಾಜಯ್ಯಂಗಾರ್
11) ದಿವ್ಯಪ್ರಬಂಧಕಿರಣ - ''
12) ವಿಮಾನಂ - ''
13) ಅಸ್ತುತೇ - ಸರ್ವಂಸಪತ್ಸ್ಯತೇ - ''
14) ಉಭಯವೇದಸುಧಾಸಮೀಕ್ಷೆ - ''
15) ಶ್ರೀರಂಗಮಹತ್ವಮ್ (ಅನುವಾದ) - ''
16) ರಾಮಾನುಜ ರಹಸ್ಯತ್ರಯ ಸೂತ್ರಗ್ರಂಥ - ''
17) ಶ್ರೀ ವಿಷ್ಣು ಸಹಸ್ರನಾಮ ಮತ್ತು ಇತರ ಸ್ತೋತ್ರಗಳು
18) ರಾಮಾನುಜ ರಹಸ್ಯತ್ರಯಮ್ (ಅನುವಾದ) - ಶ್ರೀಮತಿ ರಮಾಶ್ರೀನಿವಾಸನ್
19) ಶ್ರೀ ಕೃಷ್ಣ ಸ್ತುತಿಮಾಲಿಕಾ

# ಬರಲಿರುವ ಗ್ರಂಥಗಳು

1) ಶ್ರೀವಚನ ಭೂಷಣಂ(ವ್ಯಾಖ್ಯಾನದ ಕನ್ನಡ ಅನುವಾದ)- ಶ್ರೀಮತಿ ರಮಾಶ್ರೀನಿವಾಸನ್
2) ಅರ್ಚಿರಾದಿ (ಅನುವಾದ ಮತ್ತು ವ್ಯಾಖ್ಯಾನ) - ''
3) ತನಿಶ್ಲೋಕೀ (ವ್ಯಾಖ್ಯಾನದ ಕನ್ನಡ ಅನುವಾದ) - ''


ಪ್ರಕಾಶಕರು :

**ಶ್ರೀ ವೈಷ್ಣವಶ್ರೀ**

ನಂ.7, 6-ಎ, ಮೈನ್ ರೋಡ್, ಮಾರುತಿ ಎಕ್ಸ್‌ಟೆನ್‌ಷನ್

ಬೆಂಗಳೂರು - 560 021. ದೂರವಾಣಿ : 23320572